55

# ಆತನ ಏಳು ವಿಪತ್ತುಗಳು ಮತ್ತು ಯೆರೂಸಲೇಮಿನ ಕುರಿತ ಆತನ ದುಃಖ

## (23:13-39)

ದೇವಾಲಯದಲ್ಲಿ ಆತನ ಸಾರ್ವಜನಿಕ ಸಂಭೋದನೆಯ ಈ ಹಂತದಲ್ಲಿ, ಯೇಸು ತನ್ನನ್ನು ತಿರಸ್ಕರಿಸುತ್ತಿರುವ ಮತ್ತು ಜನರನ್ನು ತಪ್ಪಾದ ಮಾರ್ಗದಲ್ಲಿ ನಡೆಸುತ್ತಿರುವ ಯೆಹೂದಿ ನಾಯಕರ ಮೇಲೆ ಏಳು "ವಿಪತ್ತುಗಳನ್ನು" ಪ್ರಕಟಿಸುತ್ತಾನೆ. "ವಿಪತ್ತುಗಳು" ಎನ್ನುವ ಗ್ರೀಕ್ ಪದ (*ouai*) ಇದು ಇಬ್ರಿಯಾ ಪದಕ್ಕೆ (*hoy*) ಸಮನಾಗಿದೆ. ಅನೇಕ ಸಾರಿ ಪ್ರವಾದಿಗಳಿಗೆ ಉಪಯೋಗಿಸಲಾಗುತ್ತದೆ (ಯೆಶಾಯ 5:8-23; ಹಬ್ಬಕ್ಕೂಕ 2:6-19). ಇದು ದುಃಖ, ನೋವು, ಸಿಟ್ಟು, ಶೋಕ, ವಿಷಾದ, ಅಥವಾ ಯಾರಾದರೊಬ್ಬರಿಗೆ ತಮ್ಮ ಜೀವವನ್ನು ಕಳೆದುಕೊಳ್ಳುತ್ತೇನೆಂಬ ಭಯ ಈ ಎಲ್ಲಾ ಅರ್ಥಗಳನ್ನು ಕೊಡುತ್ತದೆ. John MacArthur, Jr. ರವರು ಈ ರೀತಿಯಾಗಿ ಬರೆಯುತ್ತಾರೆ, "ಈ ಪದವು ಅನುಕರಣೆಯ ಭಾವಾರ್ಥದ ಶಬ್ದದಂತೆ ಬಹಳ ಸಾಮಾನ್ಯವಾದ ಶಬ್ದವಲ್ಲ."[1] ಇನ್ನೊಂದು ರೀತಿಯಲ್ಲಿ, ಇದು ನಾಟಕೀಯವಾಗಿ ಅಭಿವ್ಯಕ್ತವಾಗುವ ಶಬ್ದವಾಗಿದೆ. ಯೇಸು ತನ್ನ ಸೇವೆಯ ಅವಧಿಯಲ್ಲಿ ಇತರ "ವಿಪತ್ತುಗಳನ್ನು" ಪ್ರಕಟಿಸಿದನು (11:21; 18:7; 24:19; 26:24). "ವಿಪತ್ತು" ಎಂಬ ಪದವು "ಆಶೀರ್ವಾದ" ಎಂಬ ಪದಕ್ಕೆ ವ್ಯತಿರಿಕ್ತವಾಗಿ ನಿಲ್ಲುತ್ತದೆ (ಲೂಕ 6:17-26).

ಈ ಸಂದರ್ಭದಲ್ಲಿ ಯೇಸುವಿನಿಂದ ಪ್ರಕಟಿಸಲಾದ ವಿಪತ್ತುಗಳ ಸಂಖ್ಯೆ ಪ್ರಶ್ನಿಸುವಂತದ್ದಾಗಿದೆ. KJVಯಲ್ಲಿ ಎಂಟು ವಿಪತ್ತುಗಳನ್ನು ಕಾಣುತ್ತೇವೆ. ವಚನ 14ರಲ್ಲಿರುವ ಒಂದನ್ನು ಆವರಣ ಚಿಹ್ನೆಯಲ್ಲಿಟ್ಟಿದ್ದರೂ, NASBಯಲ್ಲಿ ಸಹ ಎಂಟನ್ನು ಪಟ್ಟಿ ಮಾಡಲಾಗಿದೆ. NIV ಯಲ್ಲಿ ಏಳನ್ನು ಪಟ್ಟಿಮಾಡಲಾಗಿದೆ ಯಾಕೆಂದರೆ ವಚನ 14ನ್ನು ಅಡಿಟಿಪ್ಪಣಿ ಎಂದು ನಿರ್ಧರಿಸಲಾಗಿದೆ. ಇತ್ತೀಚಿನ ಅನುವಾದಕರು ವಚನಗಳನ್ನು ಈ ರೀತಿಯಲ್ಲಿ ಬರೆಯುವದಕ್ಕೆ ಕಾರಣವೆಂದರೆ ಇವು ಪ್ರಾಚೀನ ಹಸ್ತಪ್ರತಿಗಳಲ್ಲಿ ಕಾಣುವದಾಗಿದೆ. ಇದರೂ್ರ ಹೆಚ್ಚಾಗಿ, ಈ ವಚನವನ್ನು ಸೇರಿಸಿರುವವರು ಇದನ್ನು 13ನೇ ವಚನದ ಮೊದಲು ಇಲ್ಲವೇ ನಂತರ ಸೇರಿಸಿದ್ದಾರೆ. ಆದುದರಿಂದ, ಇತ್ತೀಚಿನ ಪಠ್ಯಗಳ ವಿಮರ್ಶಕರು ಈ ವಚನವನ್ನು ಇದಕ್ಕೆ ಸಮಾನವಾದ ಮಾರ್ಕ 12:40 ಅಥವಾ ಲೂಕ 20:47ರಿಂದ ತೆಗೆದುಕೊಳ್ಳಲಾಗಿದೆ ಎಂದು ವಾದಿಸುತ್ತಾರೆ. ಅಲ್ಲಿ ಈ ಹೇಳಿಕೆ ವಿವಾದ ರಹಿತವಾಗಿದೆ.[2]

ಪಠ್ಯದ ಸಾಕ್ಷಿಯ ಪ್ರಕಾರ ಮತ್ತಾಯ ಸುವಾರ್ತೆಯಲ್ಲಿರುವ ಈ ಏಳು ವಿಪತ್ತುಗಳ ಪರವಾಗಿ ಮಾತ್ರ, ಇದು ಪರಿಪೂರ್ಣ ಸಂಖ್ಯೆಯನ್ನು ಪ್ರತಿನಿಧಿಸುತ್ತದೆ (ನೋಡಿರಿ ಪ್ರಕಟಣೆ 5:1; 8:2; 10:3; 15:1; 16:1). ವಚನ 14ರ ಸೇರ್ಪಡೆ ವಚನ 13 ಮತ್ತು 15ರಲ್ಲಿ ಕಂಡುಬರುವ ಇತರ ಜನರ ಮೇಲೆ ಫರಿಸಾಯರ ಪ್ರಭಾವದ ಚರ್ಚೆಯನ್ನು ಅಡ್ಡಿಪಡಿಸುತ್ತದೆ. ವಿಪತ್ತುಗಳ ಸಂಖ್ಯೆಯಲ್ಲಿ ಸೇರ್ಪಡೆಯಾಗದಿದ್ದರೂ, ವಚನ 14ನ್ನು ಇಲ್ಲಿ ಉಳಿದ ಏಳರೊಂದಿಗೆ ಚರ್ಚಿಸಲಾಗಿದೆ.

## ಮೊದಲನೆ ವಿಪತ್ತು (23:13, 14)

**[13]ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ಪರಲೋಕ ರಾಜ್ಯದ ಬಾಗಲನ್ನು ಮನುಷ್ಯರ ಎದುರಿಗೆ ಮುಚ್ಚಿಬಿಡುತ್ತೀರಿ; ನೀವಂತೂ ಒಳಕ್ಕೆ ಹೋಗುವದಿಲ್ಲ, ಒಳಕ್ಕೆ ಹೋಗ ಬೇಕೆಂದಿರುವವರನ್ನೂ ಹೋಗಗೊಡಿಸುವದಿಲ್ಲ. [14](ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ವಿಧವೆಯರ ಮನೆಗಳನ್ನು ನುಂಗಿ ನಟನೆಗಾಗಿ ದೇವರಿಗೆ ಉದ್ದವಾದ ಪ್ರಾರ್ಥನೆಗಳನ್ನು ಮಾಡುವವರಾದ ಇವರು ಹೆಚ್ಚಾಗಿ ದಂಡನೆಯನ್ನು ಹೊಂದುವರು ಎಂಬುದೆ.)**

**ವಚನ 13.** ಮೊದಲೆಯ **ವಿಪತ್ತಿನಲ್ಲಿ,** ಹೆಚ್ಚಾದ ಇತರ ವಿಪತ್ತುಗಳಲ್ಲಿ ಹೇಳಿದಂತೆ, ಯೇಸು ಅವರನ್ನು **ಕಪಟಿಗಳೆಂದು** ಸಂಭೋದಿಸಿ **ಶಾಸ್ತ್ರಿಗಳನ್ನು, ಫರಿಸಾಯರನ್ನು** ಟೀಕಿಸುತ್ತಿದ್ದಾನೆ (23:15, 23, 25, 27, 29). "ಕಪಟಿಗಳು" ಎಂಬ ಪದಕ್ಕೆ ಗ್ರೀಕ್ (*hupokritēs*) ಅನುವಾದದ ಪದವನ್ನು ಕಲಾಶಾಲೆಯಲ್ಲಿ "ನಟ" ನಿಗೆ ಉಪಯೋಗಿಸಲಾಗಿದೆ. ಕೊನೆಗೆ ಅದು ಒಂದು ಪಾತ್ರವನ್ನು ಮಾಡಲು ಮುಖವಾಡ ಧರಿಸಿದವನು ಅದು ಆತನ ಸ್ವಂತಿಗೆ ವಿರುದ್ಧವಾದದ್ದು (6:2, 5ರ ಮೇಲಿನ ವ್ಯಾಖ್ಯಾನ ನೋಡಿರಿ). ಈ ಧಾರ್ಮಿಕ ನಾಯಕರು ತಾವು ನಿಜವಾಗಿ ಇರುವದಕ್ಕಿಂತ ಹೆಚ್ಚಾಗಿ ನೀತಿವಂತರಾಗಿ ನಟಿಸುತ್ತಿದ್ದಾರೆ ಎಂಬುದು ಯೇಸುವಿಗೆ ತಿಳಿದಿತ್ತು.

ಕರ್ತನು ಹೇಳುತ್ತಾನೆ ಯೆಹೂದ್ಯ ನಾಯಕರು, **ಫರಿಸಾಯರೇ, ಪರಲೋಕರಾಜ್ಯದ ಬಾಗಲನ್ನು ಮನುಷ್ಯರ ಎದುರಿಗೆ ಮುಚ್ಚಿಬಿಡುತ್ತೀರಿ** ಎಂದು ಹೇಳಿದನು. "ಮುಚ್ಚಿ ಬಿಡುತ್ತಾರೆ" ಎಂಬ ಪದಕ್ಕೆ ಗ್ರೀಕ್ ಪದ (*kleiō*) ಇದರ ಅರ್ಥ "ಮುಚ್ಚು," "ಬೀಗಹಾಕು" ಅಥವಾ "ಅಗಳಿ ಹಾಕು." ಇದು "ಬೀಗದ ಕೈ" (*kleis*) ಎಂಬ ಪದಕ್ಕೆ ಸಂಬಂಧಿಸಿದ್ದಾಗಿದೆ. ನಂತರದ ಈ ಪದವು ಪೇತ್ರನಿಗೆ ಯೇಸು ನೀಡಿದ "ಪರಲೋಕದ ಬೀಗದ ಕೈಯನ್ನು ನಿನಗೆ ಕೊಡುತ್ತೇನೆ" ಎಂಬ ವಾಗ್ದಾನದಲ್ಲಿ ಕಂಡುಬರುತ್ತದೆ (16:19). ಆದದರಿಂದ, ಯೆಹೂದ್ಯ ನಾಯಕರು ಮತ್ತು ಅಪೊಸ್ತಲರ ನಡುವೆ ಒಂದು ವ್ಯತ್ಯಾಸವನ್ನು ಮಾಡಬಹುದು. ಅದೇ ಸಮಯದಲ್ಲಿ ಶಾಸ್ತ್ರಿಗಳು ಮತ್ತು ಫರಿಸಾಯರು ಜನರನ್ನು ದೇವರ ರಾಜ್ಯದ ಹೊರಗೆ ಬೀಗಹಾಕುತ್ತಾರೆ. ಪೇತ್ರನು ಮತ್ತು ಇತರ ಅಪೊಸ್ತಲರು ದೇವರ ರಾಜ್ಯದ ಬಾಗಲುಗಳನ್ನು ತೆರೆದಿಡುತ್ತಾರೆ ಮತ್ತು ಜನರಿಗೆ ಒಳಗೆ ಹೋಗುವದಕ್ಕೆ ಅವಕಾಶವನ್ನು ಮಾಡಿಕೊಳ್ಳುತ್ತಾರೆ (16:19ರ ಮೇಲಿನ ವ್ಯಾಖ್ಯಾನ ನೋಡಿರಿ). ಬೀಗದ ಕೈಗಳು ಕ್ರಿಸ್ತನ ಸುವಾರ್ತೆಯನ್ನು ಪ್ರತಿನಿಧಿಸುತ್ತವೆ. ಇದಕ್ಕೆ ಸಂಬಂಧಿಸಿದ ವಾಕ್ಯಭಾಗಗಳಲ್ಲಿ, ಯೇಸು ಕೆಲವು "ಧರ್ಮೋಪದೇಶಕರನ್ನು" (ಶಾಸ್ತ್ರೀಗಳನ್ನು) "ಜ್ಞಾನದ ಬೀಗದ ಕೈಯನ್ನು" ತೆಗೆದುಕೊಂಡು ಹೋಗುವದಕ್ಕಾಗಿ ಗದರಿಸಿದನು (ಲೂಕ 11:52). ಕ್ರಿಸ್ತನ ಕುರಿತು ಅವರು ತಿರಸ್ಕಾರ, ಅವರ ಎಲ್ಲಾ ಮಾನವ ಸಂಪ್ರದಾಯ ಮತ್ತು ಕಪಟತನದ ಉದಾಹರಣೆಗಳೊಂದಿಗೆ, ಪ್ರಾಮಾಣಿಕವಾಗಿ ಸತ್ಯವನ್ನು ಹುಡುಕುವವರಿಗೆ ಅಡೆತಡೆಯಾಗಿವೆ ಎಂದು ಹೇಳುತ್ತಾನೆ.

ಯೇಸು ತನ್ನ ಹೇಳಿಕೆಯನ್ನು ಹೀಗೆ ಹೇಳುವದರ ಮೂಲಕ ಸ್ಪಷ್ಟೀಕರಿಸುತ್ತಾನೆ, **ನೀವಂತೂ ಒಳಕ್ಕೆ ಹೋಗುವದಿಲ್ಲ, ಒಳಕ್ಕೆ ಹೋಗಬೇಕೆಂದಿರುವವರನ್ನೂ ಹೋಗ ಗೊಡಿಸುವದಿಲ್ಲ.** ಅನೇಕ ಶಾಸ್ತ್ರಿಗಳು ಮತ್ತು ಫರಿಸಾಯರು ಯೇಸುವನ್ನು ಮತ್ತು ಆತನ ರಾಜ್ಯವನ್ನು ತಿರಸ್ಕರಿಸಿದರು ಎಂಬುದು ದುಃಖಕರವಾದ ಸಂಗತಿಯಾಗಿದೆ. ಆದಾಗ್ಯೂ, ಅವರು ಜನರ ಮನಸ್ಸನ್ನು ಯೇಸುವಿನ ವಿರೋಧವಾಗಿ ವಿಷಪೂರಿತಗೊಳಿಸುತ್ತಿದ್ದಾರೆ ಎಂಬುದು ಇದಕ್ಕಿಂತ ಕೆಟ್ಟದ್ದಾಗಿದೆ. ಯೋಹಾನನ ಸುವಾರ್ತೆಯಲ್ಲಿ ಕೆಲವೊಂದು ವಾಕ್ಯಭಾಗಗಳು ಅನೇಕ ಯೆಹೂದ್ಯರು ಯೇಸುವಿನಲ್ಲಿ ನಂಬಿಕೆಯನ್ನಿಟ್ಟಿದ್ದರು ಎಂಬುದನ್ನು ಪ್ರಕಟಿಸುತ್ತವೆ, ಆದರೆ ಅವರು ಆತನ ಮೇಲಿರುವ ತಮ್ಮ ನಂಬಿಕೆಯನ್ನು ವ್ಯಕ್ತಪಡಿಸುವದಕ್ಕೆ ಅಂಜುತ್ತಿದ್ದರು

ಯಾಕೆಂದರೆ ಅವರ ನಾಯಕರು ಅವರನ್ನು ತಮ್ಮ ದೇವಾಲಯದಿಂದ ಹೊರಹಾಕುತ್ತಿದ್ದರು ಅಥವಾ ಅವರಿಗೆ ಬೇರೆ ರೀತಿಯಲ್ಲಿ ಹಿಂಸೆಯನ್ನು ನೀಡುತ್ತಿದ್ದರು (ಯೋಹಾನ 7:12, 13; 19:22; 12:42; 19:38).

**ವಚನ 14.** ಹಿಂದೆ ಗಮನಿಸಿದಂತೆ, ಕೆಲವೊಂದು ಹಸ್ತಪ್ರತಿಗಳು ಹೆಚ್ಚಿನ ವಿಪತ್ತುಗಳನ್ನು ಒಳಗೊಂಡಿವೆ, ಅವುಗಳನ್ನು ಬಹುಶಃ ಮಾರ್ಕ 12:40 ಅಥವಾ 20:47 ರಿಂದ ತೆಗೆದುಕೊಂಡಿರಬಹುದು: **ವಿಧವೆಯರ ಮನೆಗಳನ್ನು ನುಂಗಿ ನಟನೆಗಾಗಿ ದೇವರಿಗೆ ಉದ್ದವಾದ ಪ್ರಾರ್ಥನೆಗಳನ್ನು ಮಾಡುವವರಾದ ಇವರು ಹೆಚ್ಚಾಗಿ ದಂಡನೆಯನ್ನು ಹೊಂದುವರು ಎಂಬುದೆ.** ಯೆಹೂದ್ಯ ನಾಯಕರು ಬಹುಶಃ ಉದ್ದೇಶ ಪೂರ್ವಕವಾಗಿ ವಿಧವೆಯರನ್ನು ಅವರ ಸ್ಥಿರಾಸ್ತಿಯನ್ನು ಕಿತ್ತುಕೊಳ್ಳುವದರ ಮೂಲಕ ಮೋಸಪಡಿಸಿರಬಹುದು. ಬಹುಶಃ ಅವರು ತಮ್ಮ ಮೃತ ಪತಿಯಿಂದ ತಮಗೆ ದೊರೆತ ಈ ಸ್ಥಿರಾಸ್ತಿಗಳಿಗೆ ವಾರಸುದಾರರನ್ನು ನೇಮಿಸಿರಬಹುದು ಮತ್ತು ಅವರು ಈ ಆಸ್ತಿಯನ್ನು ಹೆಚ್ಚಿನ ಲಾಭಕ್ಕಾಗಿ ಉಪಯೋಗಿಸಿಕೊಳ್ಳುತ್ತಿರಬಹುದು.[3] ಇನ್ನೊಂದು ಸಾಧ್ಯತೆ ಎಂದರೆ ಯೆಹೂದಿ ನಾಯಕರು ಈ ವಿಧವೆಯರ ಅದರಾತಿಥ್ಯವನ್ನು ಸ್ವಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳುತ್ತಿರಬಹುದು.[4] ಇತ್ತೀಚೆಗೆ ಸಂಗಾತಿಯನ್ನು ಕಳೆದು ಕೊಂಡವರು ಹೆಚ್ಚಾಗಿ ಈ ಮೋಸಕ್ಕೆ ಗುರಿಯಾಗುತ್ತಿರಬಹುದು. ಜನರು ದುಖದಲ್ಲಿರುವ ವಿಧವೆ ಯರ ಲಾಭವನ್ನು ಪಡೆದುಕೊಳ್ಳುತ್ತಿದ್ದರು ಎಂಬುದು ವಿಷಾದನೀಯವಾದ ಸಂಗತಿಯಾಗಿದೆ, ಅದರಲ್ಲೂ ವಿಶೇಷವಾಗಿ ಆ ವ್ಯಕ್ತಿ ಧಾರ್ಮಿಕ ನಾಯಕನಾಗಿದ್ದಲ್ಲಿ ದುರಾದೃಷ್ಟಕರವಾದ ಸಂಗತಿಯಾಗಿದೆ.

ಈ ಕಪಟಿಗಳು ತಮ್ಮ "ಉದ್ದವಾದ ಪ್ರಾರ್ಥನೆಗೆ" ಹೆಸರಾಗಿದ್ದರು. ಈ ಹಿಂದೆಯೇ ಯೇಸು ಅವರನ್ನು ಸಾರ್ವಜನಿಕ ಸ್ಥಳಗಳಲ್ಲಿ ನಿಂತುಕೊಂಡು ಉದ್ದವಾದ ಮತ್ತು ಪುನರಾವೃತ್ತಿ ಪ್ರಾರ್ಥನೆಗಳನ್ನು ಮಾಡುವದರ ಕುರಿತಾಗಿ ಗಮನವನ್ನು ಸೆಳೆದಿದ್ದಾನೆ (ನೋಡಿರಿ 6:5-7ರ ಮೇಲಿನ ವ್ಯಾಖ್ಯಾನ). ಈ ಜನರು ಪ್ರದರ್ಶಿಸುವ ದೈವೀಕತೆ ಸಮಾಜದಲ್ಲಿ ಅತ್ಯಂತ ಕೀಳು ಮಟ್ಟದಲ್ಲಿರುವವರಿಗೆ ಸಂಬಂಧಿಸಿದನ್ನು ದೋಚಿಕೊಳ್ಳುವಾಗ ಬಹಿರಂಗವಾಯಿತು.

ಈ ವಾಕ್ಯದಲ್ಲಿರುವ ಕೊನೆಯ ಹೇಳಿಕೆ, ಆದುದರಿಂದ **ಹೆಚ್ಚಾಗಿ ದಂಡನೆಯನ್ನು ಹೊಂದುವರು ಎಂದು ಹೇಳಿದನು,** ಪುನಃ ಮನಸ್ಸಿನಲ್ಲಿ ನರಕದಲ್ಲಿರುವ ದಂಡನೆಯ ಕ್ರಮದ ಕುರಿತು ಪ್ರಶ್ನೆಯನ್ನು ಹುಟ್ಟಿಸುತ್ತದೆ. ಈ ವಿಚಾರವನ್ನು ಬೆಂಬಲಿಸುವದಕ್ಕಾಗಿ ಅನೇಕ ವಾಕ್ಯಭಾಗಗಳಿವೆ (11:23, 24; ಲೂಕ 12:47, 48; 2 ತಿಮೋಥೆ 4:14; ಇಬ್ರಿಯ 2:2, 3; 10:29; ಯಾಕೋಬ 3:1). ದೇವರು ಪ್ರತಿಯೊಬ್ಬ ಮನುಷ್ಯನ ಕೃತ್ಯಗಳಿಗೆ ಅನುಸಾರವಾಗಿ ಶಿಕ್ಷೆಯನ್ನು ನೀಡುತ್ತಾನೆ (ರೋಮಾಪುರ 2:5, 6; 2 ಥೆಸಲೋನಿಕ 1:7, 8). ವಾಕ್ಯಭಾಗದ ಮುಕ್ತಾಯವು ಹೀಗಿದೆ, ಯಾರು ಹೆಚ್ಚಿನ ಶಿಕ್ಷೆಗೆ ಅರ್ಹರಾಗಿರುತ್ತಾರೋ ಅವರು ಅದನ್ನು ಹೊಂದುತ್ತಾರೆ, ಅದೇ ಸಮಯದಲ್ಲಿ ಯಾರು ಕಡಿಮೆ ಶಿಕ್ಷೆಗೆ ಅರ್ಹರಾಗಿರುತ್ತಾರೋ ಅವರು ಅದನ್ನು ಹೊಂದುತ್ತಾರೆ.

## ಎರಡನೆಯ ವಿಪತ್ತು (23:15)

**15 ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಒಬ್ಬನನ್ನು ನಿಮ್ಮ ಮತದಲ್ಲಿ ಸೇರಿಸಿಕೊಳ್ಳುವದಕ್ಕಾಗಿ ಭೂಮಿಯನ್ನೂ ಸಮುದ್ರವನ್ನೂ ಸುತ್ತಿಕೊಂಡು ಬರುತ್ತೀರಿ; ಅವನು ಸೇರಿದ ಮೇಲೆ ಅವನನ್ನು ನಿಮಗಿಂತ ಎರಡಷ್ಟಾಗಿ ನರಕಪಾತ್ರನಾಗಮಾಡುತ್ತೀರಿ.**

**ವಚನ 15.** ಮೊದಲನೆ ವಿಪತ್ತು ಇತರರು ದೇವರ ರಾಜ್ಯಕ್ಕೆ ಸೇರುವದಕ್ಕೆ ಅಡತಡೆಯಾಗುತ್ತಿರುವದಕ್ಕಾಗಿ ಯೆಹೂದಿ ನಾಯಕರನ್ನು ಖಂಡಿಸುತ್ತದೆ (23:13). ಇದಕ್ಕೆ ಸಂಬಂಧಿಸಿದಂತೆ ಇತರರನ್ನು ತಮ್ಮ ಕಪಟತನಕ್ಕೆ ಪರಿವರ್ತಿಸುತ್ತಿರುವದಕ್ಕಾಗಿ ಎರಡನೆ

**ವಿಪತ್ತು** ಅವರ ಮೇಲೆ ಪ್ರಕಟವಾಯಿತು.

**ಮತದಲ್ಲಿ ಸೇರಿಸಿಕೊಳ್ಳುವದು** (*prosēlutos*) ಎಂಬ ಪದವು ಸಾಮಾನ್ಯವಾಗಿ ಅನ್ಯನು ಯೆಹೂದ್ಯ ಧರ್ಮಕ್ಕೆ ಮತಾಂತರ ಹೊಂದುವದನ್ನು ಸೂಚಿಸುತ್ತದೆ. "ಮತಾಂತರ ಹೊಂದಲು ಬಂದಿರುವವನು" ನಿಜವಾಗಿಯೂ ಯೆಹೂದ್ಯನಾಗಲು ಸಾಧ್ಯವಿಲ್ಲ; ಅವರು ದೇವರಿಗೆ ಭಯಪಡುವವರು ಮತ್ತು ಯೆಹೂದ್ಯ ಧರ್ಮದ ಕುರಿತು ಅನುಕಂಪವುಳ್ಳವನು (ಅಪೊಸ್ತಲರ ಕೃತ್ಯಗಳು 10:2, 22, 35; 13:16, 26. 50; 16:14; 17:4, 17; 18:7).[5] "ಮತಾಂತರ ಹೊಂದಿದ ನೀತಿವಂತರು" ಅವರು ಸುನ್ನತಿ ಮಾಡಿಕೊಳ್ಳುತ್ತಾರೆ ಮತ್ತು ನಿಜವಾದ ಯೆಹೂದ್ಯರಾಗುತ್ತಾರೆ (ಅಪೊಸ್ತಲರ ಕೃತ್ಯಗಳು 2:10; 6:5; 13:43). ಆದಾಗ್ಯೂ, "ಮತಾಂತರ ಹೊಂದಿದವನು" "proselyte" ಎಂಬ ಪದವು ಈ ಸನ್ನಿವೇಶದಲ್ಲಿ ಫರಿಸಾಯರ ಪಂಗಡಕ್ಕೆ ಮತಾಂತರ ಹೊಂದಿದ ವ್ಯಕ್ತಿಯನ್ನು ಉಲ್ಲೇಖಿಸುತ್ತದೆ.

ಫರಿಸಾಯರು ಒಬ್ಬನನ್ನು ಮತಾಂತರಗೊಳಿಸಲು ಬಹಳಷ್ಟು ಶ್ರಮವಹಿಸುತ್ತಾರೆ. **ಭೂಮಿಯನ್ನು ಸಮುದ್ರವನ್ನು ಸುತ್ತಿಕೊಂಡು ಬರುತ್ತಾರೆ** ಎಂಬ ವಾಕ್ಯಭಾಗವು "ಹೆಚ್ಚಿನ ಪ್ರಯತ್ನ" ಎಂಬುದಕ್ಕೆ ನಾಣ್ಣುಡಿಯ ರೂಪದ ವ್ಯಕ್ತಪಡಿಸುವಿಕೆಯಾಗಿದೆ. ಯೆಹೂದ್ಯರು ಅನ್ಯ ಮತದವರಿಗೆ ಯೆಹೂದಿ ಧರ್ಮ ಆಕರ್ಷಣೀಯವಾಗಿರುವಂತೆ ಮಾಡಲು ಪ್ರಯತ್ನಿಸಿದರು. ಅವರು ಕಾರ್ಯ ಸ್ವಲ್ಪ ಮಟ್ಟಿಗೆ ಜಯವನ್ನು ಹೊಂದುತ್ತಿರುವ[6] ಸಂದರ್ಭದಲ್ಲಿ ಫರಿಸಾಯರ ಫಲಿತಾಂಶ ನಿರಾಶೆ ತರುವಂತದ್ದಾಗಿತ್ತು.

ಒಂದು ಸಾರಿ ಅವರು ಒಬ್ಬನನ್ನು ಮಂತಾಂತರಗೊಳಿಸಿದರೆ ಅವರು ಅವನನ್ನು ತಮಗಿಂಥ **ಎರಡರಷ್ಟಾಗಿ ನರಕಪಾತ್ರನಾಗ ಮಾಡುತ್ತಾರೆ** ಎಂದು ಯೇಸು ಹೇಳುತ್ತಾನೆ. "ನರಕ ಪಾತ್ರ" ಇದು ಅಪಾಯದ ಸೂಚನೆಯನ್ನು ವ್ಯಕ್ತಪಡಿಸುವದಾಗಿದೆ ಇದರ ಅರ್ಥ ಒಬ್ಬನು ಕೇವಲ ನರಕಕ್ಕೆ ಪಾತ್ರನು ಎಂಬುದಾಗಿದೆ. ಮತಾಂತರ ಹೊಂದಿದವರು ಈ ಧರ್ಮಾಂದಂತೆಯ ದಾಹದಲ್ಲಿ ತಮ್ಮ ತರಬೇತಿದಾರರನ್ನು ಮೀರಿಸುವವರಾಗಿರುತ್ತಾರೆ.[7] ಈ ಒಂದು ದಾಹವು ಸುಳ್ಳು ಮತ್ತು ಕಪಟತನವನ್ನು ಅವಲಂಭಿಸಿರುವದರಿಂದ; ಅವರು ಎರಡರಷ್ಟು ದಂಡನೆಗೆ ಅರ್ಹರಾಗುತ್ತಾರೆ.

## ಮೂರನೆಯ ವಿಪತ್ತು (23:16-22)

**16ಅಯ್ಯೋ, ದಾರಿತೋರಿಸುವ ಕುರುಡರೇ, ಒಬ್ಬನು ದೇವಾಲಯದ ಮೇಲೆ ಆಣೆಯಿಟ್ಟುಕೊಂಡರೆ ಅದೇನು ಆಣೆಯಲ್ಲ. ಆದರೆ ಒಬ್ಬನು ದೇವಾಲಯದ ಚಿನ್ನದ ಮೇಲೆ ಆಣೆಯಿಟ್ಟುಕೊಂಡರೆ ಅದನ್ನು ನಡಿಸಲೇಬೇಕು ಎಂದು ನೀವು ಹೇಳುತ್ತೀರಿ.**
**17ಹುಚ್ಚರೇ, ಕುರುಡರೇ, ಯಾವದು ಹೆಚ್ಚಿನದು? ಚಿನ್ನವೋ, ಚಿನ್ನವನ್ನು ಪಾವನ ಮಾಡುವ**
**ದೇವಾಲಯವೋ? 18ಒಬ್ಬನು ಯಜ್ಞವೇದಿಯ ಮೇಲೆ ಆಣೆಯಿಟ್ಟುಕೊಂಡರೆ ಅದೇನು**
**ಆಣೆಯಲ್ಲ, ಆದರೆ ಅದರಲ್ಲಿರುವ ಕಾಣಿಕೆಯ ಮೇಲೆ ಆಣೆಯಿಟ್ಟುಕೊಂಡರೆ ಅದನ್ನು ನಡಿಸಲೇ**
**ಬೇಕು ಎಂದು ಹೇಳುತ್ತೀರಿ. 19ಕುರುಡರೇ, ಯಾವದು ಹೆಚ್ಚಿನದು? ಕಾಣಿಕೆಯೋ, ಆ**
**ಕಾಣಿಕೆಯನ್ನು ಪಾವನಮಾಡುವ ಯಜ್ಞವೇದಿಯೋ? 20ಹೀಗಿರುವದರಿಂದ ಯಜ್ಞವೇದಿಯ**
**ಮೇಲೆ ಆಣೆಯಿಟ್ಟುಕೊಂಡರೆ ಅದರ ಮೇಲೆಯೂ ಅದರಲ್ಲಿರುವ ಎಲ್ಲಾದರ ಮೇಲೆಯೂ**
**ಆಣೆಯಿಟ್ಟುಕೊಂಡ ಹಾಗಾಯಿತು. 21ದೇವಾಲಯದ ಮೇಲೆ ಆಣೆಯಿಟ್ಟುಕೊಂಡರೆ ಅದರ**
**ಮೇಲೆಯೂ ಅದರಲ್ಲಿ ವಾಸಮಾಡುವಾತನ ಮೇಲೆಯೂ ಆಣೆಯಿಟ್ಟುಕೊಂಡ ಹಾಗಾಯಿತು.**
**22ಪರಲೋಕದ ಮೇಲೆ ಆಣೆಯಿಟ್ಟುಕೊಂಡರೆ ದೇವರಸಿಂಹಾಸದ ಮೇಲೆಯೂ ಅದರಲ್ಲಿ ಕೂತಿರುವಾತನ ಮೇಲೆಯೂ ಆಣೆಯಿಟ್ಟುಕೊಂಡ ಹಾಗಾಯಿತು.**

**ವಚನ 16.** ಮೂರನೆ ವಿಪತ್ತು ಇತರ **ವಿಪತ್ತು**ಗಳಿಗಿಂತ ಭಿನ್ನವಾಗಿ ಪ್ರಾರಂಭವಾಗುತ್ತದೆ. ಯೆಹೂದ್ಯ ನಾಯಕರನ್ನು "ಶಾಸ್ತ್ರಿಗಳೇ, ಫರಿಸಾಯರೇ, ಮತ್ತು ಕಪಟಿಗಳೇ" ಎಂದು ಸಂಬೋಧಿಸುವದಕ್ಕೆ ಬದಲಾಗಿ ಯೇಸು ಅವರನ್ನು **ದಾರಿತೋರಿಸುವ ಕುರುಡರೇ,** ಎಂದು ಕರೆಯುತ್ತಾನೆ. ಹಿಂದೆ ಯೇಸು ಫರಿಸಾಯರ ಕುರಿತಾಗಿ, "ಅವರ ಮಾತನ್ನು ಬಿಡಿರಿ; ತಾವೇ ಕುರುಡರು ಮತ್ತೊಬ್ಬರಿಗೆ ದಾರಿತೋರಿಸುವದಕ್ಕೆ ಹೋಗುತ್ತಾರೆ; ಕುರುಡನು ಕುರುಡನಿಗೆ ದಾರಿ ತೋರಿಸಿದರೆ ಅವರಿಬ್ಬರೂ ಕುಣಿಯಲ್ಲಿ ಬೀಳುವರು" ಎಂದು ಹೇಳುತ್ತಾನೆ (15:14). ಫರಿಸಾಯರು ತಮ್ಮನ್ನು ತಾವು ಆತ್ಮೀಕ ಬೆಳಕು ಮತ್ತು ಜ್ಞಾನದ ಮೂಲ ಎಂದು ಹೆಮ್ಮೆ ಪಟ್ಟುಕೊಳ್ಳುತ್ತಿದ್ದರು, ಆದಾಗ್ಯೂ ಅವರೇ ಆತ್ಮೀಕವಾಗಿ ಕುರುಡರಾಗಿದ್ದರು. ಅವರಿಗೆ ಸತ್ಯವೇನೆಂದು ಗೊತ್ತಿರಲಿಲ್ಲ! ಒಂದು ವೇಳೆ ಅವರು ತಾವೇ ಸತ್ಯವನ್ನು ತಿಳಿದುಕೊಳ್ಳದಿದ್ದರೆ ಅವರು ಮತ್ತು ಅವರ ಹಿಂಬಾಲಕರು ನ್ಯಾಯ ತೀರ್ಪಿನ ದಿನದಲ್ಲಿ ತೊಂದರೆಗೆ ಒಳಗಾಗುತ್ತಾರೆ ಮತ್ತು ನರಕಕ್ಕೆ ದೊಬ್ಬಲ್ಪಡುತ್ತಾರೆ.

ಯೇಸು ಫರಿಸಾಯರ ಆತ್ಮೀಕ ಕುರುಡುತನವನ್ನು ಆಣೆ ಇಡುವ ಉದಾಹರಣೆ ತೆಗೆದುಕೊಂಡು 23:16-22ರಲ್ಲಿ ಹೇಳಿದ್ದಾನೆ (ನೋಡಿರಿ 5:34-37ರ ಮೇಲಿನ ವ್ಯಾಖ್ಯಾನ). ಆಣೆ ಇಡುವದರ ಕುರಿತಾಗಿ ಅವರಿಗೆ ಇರುವ ತಪ್ಪಾದ ತರ್ಕವನ್ನು ತೋರಿಸುತ್ತಾನೆ. ಒಬ್ಬನು ದೇವಾಲಯ, ಯಜ್ಞವೇದಿ ಅಥವಾ ಪರಲೋಕದ ಮೇಲೆ ಆಣೆಯಿಟ್ಟುಕೊಂಡಿದ್ದೇನೆಂದು ನಂಬುವವನು ತಾನು ಜೀವಿಸುವ ದೇವರ ಮೇಲೆ ಆಣೆಯಿಟ್ಟಿಲ್ಲ ಎಂದು ಹೇಳಿದರೆ ತನ್ನನ್ನು ತಾನು ಮೂರ್ಖನನ್ನಾಗಿಸುತ್ತಾನೆ. ದೇವರು ಪದದ ಬಂಧದಿಂದ ಮೋಸಹೋಗುವ ವ್ಯಕ್ತಿಯಲ್ಲ. ಈ ವಿಪತ್ತು ಆಣೆಯಿಡುವದನ್ನು ಅನುಮತಿಸುವದಿಲ್ಲ ಬದಲಾಗಿ ಇದು ಆತನ ವಿರೋಧಿಗಳ ಕುರುಡುತನವನ್ನು ವ್ಯಕ್ತಪಡಿಸುತ್ತದೆ.[8]

ಫರಿಸಾಯರು ತಮ್ಮ ಶಿಷ್ಯರಿಗೆ, **ಒಬ್ಬನು ದೇವಾಲಯದ ಮೇಲೆ ಆಣೆಯಿಟ್ಟುಕೊಂಡರೆ ಅದೇನು ಆಣೆಯಲ್ಲ. ಆದರೆ ಒಬ್ಬನು ದೇವಾಲಯದ ಚಿನ್ನದ ಮೇಲೆ ಆಣೆಯಿಟ್ಟುಕೊಂಡರೆ ಅದನ್ನು ನಡಿಸಲೇಬೇಕು** ಎಂದು ಹೇಳುತ್ತಾರೆ. "ದೇವಾಲಯ" (*naos*) ಮಹಾಪರಿಶುದ್ಧ ಸ್ಥಳ - ದೇವರ ಪ್ರಸನ್ನತೆಯನ್ನು ಪ್ರತಿನಿಧಿಸುತ್ತಿತ್ತು; ಇದು ಆತನು ತನ್ನ ಹೆಸರನ್ನು ಇರಿಸಿದ ಸ್ಥಳವಾಗಿತ್ತು (ನೋಡಿರಿ 2 ಪೂರ್ವಕಾಲವೃತ್ತಾಂತ 5:11-14; 6:18-21). ಆದಾಗ್ಯೂ, ಫರಿಸಾಯರು ಯಾರಿಗಾಗಿ ದೇವಾಲಯವನ್ನು ನಿರ್ಮಿಸಿದ್ದಾರೋ ಅದಕ್ಕಿಂತ ಹೆಚ್ಚಾಗಿ ದೇವಾಲಯದ ಚಿನ್ನದ ಮೇಲೆ ಇಟ್ಟಂತ ಆಣೆಯನ್ನು ಬಹಳ ನಡೆಸಬೇಕೆಂದು ಹೇಳುತ್ತಿದ್ದರು. ಇಂತಹ ಚಿನ್ನವು ಮಹಾಪರಿಶುದ್ಧ ಸ್ಥಳದ ಗೋಡೆಗಳಿಗೆ ಮಾಡಿದ ಚಿನ್ನದ ಲೇಪನವನ್ನು ಉಲ್ಲೇಖಿಸುತ್ತದೆ. Josephus ರವರು ಹೀಗೆ ಬರೆದಿದ್ದಾರೆ,

> ದೇವಾಲಯದ ಹೊರಭಾಗವು ತನ್ನ ಮುಂದಿನ ... ಭಾಗವನ್ನು ಎಲ್ಲಾಕಡೆ ಅತ್ಯಂತ ಭಾರವಾದ ಚಿನ್ನದ ಲೇಪನದಿಂದ ಹೊದಿಸಲ್ಪಟ್ಟಿತ್ತು ಮತ್ತು ಸೂರ್ಯನು ಉದಯವಾಗುವ ಬೀಳುವ ಮೊದಲು ಅಗ್ನಿಮಯ ಕಿರಣಗಳು ಅತ್ಯಂತ ಭವ್ಯದಿಂದ ಪ್ರತಿಫಲಿಸುತ್ತಿದ್ದವು ಮತ್ತು ಯಾರು ಒತ್ತಾಯಪೂರ್ವಕವಾಗಿ ಅದನ್ನು ನೋಡುತ್ತಾರೋ ಅವರಿಗೆ ಅವರು ಸೂರ್ಯನ ಕಿರಣಗಳನ್ನು ನೇರವಾಗಿ ದೃಷ್ಟಿಸುತ್ತಿದ್ದಾರೋ ಎಂಬಂತೆ ತಮ್ಮ ದೃಷ್ಟಿಯನ್ನು ಬೇರೆಡೆಗೆ ತಿರುಗಿಸುವಂತೆ ಮಾಡುತ್ತಿದ್ದವು.[9]

ಇನ್ನೊಂದು ಸಾಧ್ಯತೆ ಎಂದರೆ ಚಿನ್ನವು ದೇವಾಲಯಕ್ಕೆ ನೀಡಿದ ಕೊಡುಗೆಯನ್ನು ಉಲ್ಲೇಖಿಸುತ್ತದೆ.[10]

**ವಚನ 17.** ಯೇಸು ಫರಿಸಾಯರನ್ನು **ಮೂರ್ಖರು** ಎಂದು ಕರೆಯುತ್ತಾನೆ. ಈ ಮೊದಲು ಆತನು "ಮೂರ್ಖರು" (*mōros*) ಎಂಬ ಪದ ಪ್ರಯೋಗವನ್ನು ಕೋಪದಲ್ಲಿ ಮಾಡುವದರ ಕುರಿತು ಎಚ್ಚರಿಕೆಯನ್ನು ನೀಡುತ್ತಾನೆ (5:22). Alan Hugh McNeile ರವರು

ಹೀಗೆ ಯೋಚಿಸುತ್ತಾರೆ, ಇದು ಪರಿಗಣಿಸಬಹುದಾದ ಪದವಲ್ಲ ಎಂದು ಕಂಡುಬರುತ್ತದೆ, ಬಗಲಾಗಿ ಅವರಲ್ಲಿರುವ ಮುಂಗೋಪಿತನ ಈ ಪದವನ್ನು ಉಚ್ಚರಿಸುವಂತೆ ಮಾಡುತ್ತದೆ.[11] ಅವರ ಹಾಸ್ಯಾಸ್ಪದವಾದ ವಿವೇಚನೆಯನ್ನು ಬಹಿರಂಗಪಡಿಸಲು, ಯೇಸು ಅವರಿಗೆ, **ಯಾವದು ಹೆಚ್ಚಿನದು? ಚಿನ್ನವೋ, ಚಿನ್ನವನ್ನು ಪಾವನ ಮಾಡುವ ದೇವಾಲಯವೋ?** ಕೇಳಿದನು. ಖಂಡಿತವಾಗಿಯೂ ದೇವಾಲಯವು ಅದರಲ್ಲಿರುವ ಚಿನ್ನಕ್ಕಿಂತ ಹೆಚ್ಚು ಪ್ರಾಮುಖ್ಯವಾಗಿದೆ. ದೇವಾಲಯವು ಚಿನ್ನವನ್ನು ಪರಿಶುದ್ಧವಾಗಿ ಮಾಡುತ್ತದೆ ಹೊರತು ದೇವಾಲಯ ಚಿನ್ನವನ್ನಲ್ಲ.

**ವಚನ 18.** ಈ ಫರಿಸಾಯರು ಈ ರೀತಿಯಾಗಿ ಸಹ ಹೇಳಿದರು, ಒಬ್ಬನು **ಯಜ್ಞವೇದಿಯ ಮೇಲೆ** ಆಣೆಯಿಟ್ಟರೆ ಅದೇನು **ಆಣೆಯಲ್ಲ.** ಆದಾಗ್ಯೂ, ಒಬ್ಬನು ಅದರ ಮೇಲಿರುವ **ಕಾಣಿಕೆಯ ಮೇಲೆ** ಆಣೆಯಿಟ್ಟರೆ, ಅವನು ತನ್ನ ಆಣೆಯನ್ನು **ನಡಿಸಲು** ಬದ್ಧನಾಗಿದ್ದಾನೆ. ಇಲ್ಲಿ ಉಲ್ಲೇಖಿಸಲಾದ ಯಜ್ಞವೇದಿ ದೇವಾಲಯದ ದ್ವಾರದಲ್ಲಿ ಇರುವ ಸರ್ವಾಂಗ ಹೋಮದ ಯಜ್ಞವೇದಿ. ಈ ಯಜ್ಞವೇದಿಯ ಮೇಲೆ, ಯಾಜಕನು ಪ್ರತಿದಿನ ಪ್ರಾಣಿಗಳ ಬಲಿಯನ್ನು ಅರ್ಪಿಸುತ್ತಿದ್ದನು. ಇನ್ನಿತರ ಯಜ್ಞಗಳು ಧಾನ್ಯ ಮತ್ತು ದ್ರಾಕ್ಷರಸದ ಕಾಣಿಕೆಯನ್ನು ಒಳಗೊಂಡಿದ್ದವು. "ಕಾಣಿಕೆ" (*dōron*) ಪದಕ್ಕಿರುವ ಗ್ರೀಕ್ ಪದವನ್ನು "ಬಹುಮಾನ" ಎಂದು ಸಹ ಅನುವಾದಿಸಲಾಗಿದೆ (NIV).

**ವಚನ 19.** ಮತ್ತೊಮ್ಮೆ, ಫರಿಸಾಯರ ವಿವೇಚನೆ ದೋಷದಿಂದ ಕೂಡಿತ್ತು. ಯೇಸು **ಯಾವದು ಹೆಚ್ಚಿನದು? ಕಾಣಿಕೆಯೋ, ಆ ಕಾಣಿಕೆಯನ್ನು ಪಾವನಮಾಡುವ ಯಜ್ಞವೇದಿಯೋ?** ಎಂದು ಕೇಳಿದನು. "ಯಜ್ಞವೇದಿಗೆ ಸೋಂಕಿದೆಲ್ಲವು ಪರಿಶುದ್ಧವಾಗುತ್ತದೆ." ಎಂದು ವಿಮೋಚನಕಾಂಡ 29:37 ಹೇಳುತ್ತದೆ. ಸ್ಪಷ್ಟವಾಗಿ, ಯಜ್ಞವೇದಿಯು ಕಾಣಿಕೆಗಳನ್ನು ಶುದ್ಧಗೊಳಿಸುವದರಿಂದ ಅದು ಬಹಳ ಮುಖ್ಯವಾದದ್ದು.

**ವಚನಗಳು 20-22.** ಕರ್ತನು **ಯಜ್ಞವೇದಿಯ** ಮೇಲೆ ಆಣೆಯಿಡುವದು **ಎಲ್ಲಾದರ ಮೇಲೆಯೂ ಆಣೆಯಿಟ್ಟುಕೊಂಡಂತೆ** ಎಂದು ಹೇಳುತ್ತಾನೆ. ಫರಿಸಾಯರ ನಿಯಮಗಳು ಕಪಟಿಗಳಿಗೆ ಆಣೆಯಿಟ್ಟುಕೊಳ್ಳಬಹುದು ಆದರೆ ಅದನ್ನು ನಡೆಸಬೇಕೆಂಬ ವಚನ ಬದ್ಧತೆಯಿಲ್ಲ ಎಂಬ ಅರ್ಥವನ್ನು ಒದಗಿಸುತ್ತದೆ. ಸುಳ್ಳುಹೇಳುವದನ್ನು ಸಮರ್ಥಿಸಿಕೊಳ್ಳುವದಕ್ಕೆ ಅವರಿಗಿರುವ ಅನುಕೂಲಕರವಾದ ಮಾರ್ಗ. ಯೇಸು ಫರಿಸಾಯರು ಸಂಗತಿಯನ್ನು ತಲೆಕೆಳೆಗೆ ಮಾಡಿದ್ದಾರೆಂದು ಮಾತ್ರ ಹೇಳುವದಿಲ್ಲ. ಆತನು ತನ್ನ ಶೋತೃಗಳಿಗೆ ಪ್ರತಿಯೊಂದು ಆಣೆಗೆ ಬದ್ಧತೆಯಿದೆ ಎಂಬುದನ್ನು ಹೇಳುತ್ತಿದ್ದಾನೆ.[12]

ಯಾವಾಗಲಾದರು ಜನರು **ದೇವಾಲಯದ ಮೇಲೆ** ಆಣೆಯಿಟ್ಟು ಕೊಂಡರೆ ಅವರು ಅದರಲ್ಲಿ ವಾಸಿಸುವ ದೇವರ ಮೇಲೆ ಸಹ **ಆಣೆಯಿಟ್ಟುಕೊಳ್ಳುತ್ತಾರೆ** ಎಂಬುದನ್ನು ಸೂಚಿಸುತ್ತಿದ್ದಾನೆ. ದೇವಾಲಯ - ನಿರ್ದಿಷ್ಟವಾಗಿ ಪರಿಶುದ್ಧರಲ್ಲಿ ಪರಿಶುದ್ಧನ ಸ್ಥಳವಾಗಿದೆ - ದೇವರ ಪ್ರಸನ್ನತೆಯನ್ನು ಪ್ರತಿನಿಧಿಸುವ ಸ್ಥಳವಾಗಿದೆ. ಇದು ಪರಲೋಕ ದೇವರ ನಿಜವಾದ ಸಿಂಹಾಸನದ ಕೊಠಡಿಯ ನೆರಳಾಗಿದೆ (ನೋಡಿರಿ ಇಬ್ರಿಯ 9:1-14).

Mishnah ಪ್ರಕಾರ, ಯಾರು "ಪರಲೋಕ ಮತ್ತು ಭೂಲೋಕ" ಎಂದು ಆಣೆಯಿಡುತ್ತಾರೋ ಅವರು ಬಿಡುಗಡೆ ಹೊಂದುತ್ತಾರೆ. ಆದಾಗ್ಯೂ, ಅವರು ದೇವರನ್ನು ಬೇಡಿಕೊಳ್ಳುತ್ತಾರೋ (Adonai, Yahweh, ಅಥವಾ ಸರ್ವಶಕ್ತನು), ಆಗ ಅವರು ತಮ್ಮ ಆಣೆಗೆ ಬದ್ಧರಾಗಿರುತ್ತಾರೆ.[13] ಇದಕ್ಕೆ ಭಿನ್ನವಾಗಿ, ಯೇಸು ಯಾರಾದರು **ಪರಲೋಕದ ಮೇಲೆ** ಆಣೆಯಿಟ್ಟುಕೊಂಡರೆ **ದೇವರಸಿಂಹಾಸದ ಮೇಲೆಯೂ ಅದರಲ್ಲಿ ಕೂತಿರುವಾತನ ಮೇಲೆಯೂ ಆಣೆಯಿಟ್ಟುಕೊಂಡ ಹಾಗಾಯಿತು** ಎಂದು ಹೇಳಿದನು. ಯೆಶಾಯ 66:1ರಲ್ಲಿ "ದೇವರು ಪರಲೋಕವು ನನಗೆ ಸಿಂಹಾಸನ ಮತ್ತು ಭೂಮಿಯು ನನಗೆ ಪಾದಪೀಠವಾಗಿದೆ" ಎಂದು ದೇವರು ಹೇಳಿದ್ದಾನೆ.

ಇಂಥಹ ಎಲ್ಲಾ ಆಣೆಗಳನ್ನು ಇಟ್ಟುಕೊಳ್ಳುವದರ ಕುರಿತಾಗಿ ಯೇಸು ಎಚ್ಚರಿಸುತ್ತಾನೆ

(5:33-37). ಒಬ್ಬನು ಆಣೆಯಿಟ್ಟುಕೊಂಡರೆ ಅದನ್ನು ನಡೆಸುವದಕ್ಕೆ ಬದ್ಧನಾಗಿದ್ದಾನೆ ಎಂಬುದನ್ನು ತೋರಿಸಿಕೊಟ್ಟಿದ್ದಾನೆ. ಪ್ರತಿಯೊಂದು ಆಣೆಯು ಪದಗಳನ್ನು ಗಣನೆಗೆ ತೆಗೆದುಕೊಳ್ಳದೇ ಅದಕ್ಕೆ ಸಮರ್ಪಿಸಿಕೊಂಡವನಾಗಿರುತ್ತಾನೆ ಮತ್ತು ದೇವರು ಇದಕ್ಕೆ ಅಂತಿಮ ಸಾಕ್ಷಿಯಾಗಿದ್ದಾನೆ ಮತ್ತು ಆತನು ನಮ್ಮ ಮಾತುಗಳಿಗೆ ನ್ಯಾಯತೀರ್ಪನ್ನು ನೀಡುವ ಅಂತಿಮ ತೀರ್ಪುಗಾರನಾಗಿದ್ದಾನೆ (ನೋಡಿರಿ 12:36, 37).[14]

## ನಾಲ್ಕನೆಯ ವಿಪತ್ತು (23:23, 24)

**[23]ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಮರುಗ ಸೋಪು ಜೀರಿಗೆಗಳಲ್ಲಿ ಹತ್ತರಲ್ಲೊಂದು ಪಾಲು ಕೊಡುತ್ತೀರಿ ಸರಿ, ಆದರೆ ಧರ್ಮ ಶಾಸ್ತ್ರದಲ್ಲಿ ಗೌರವವಾದ್ದನ್ನು, ಅಂದರೆ ನ್ಯಾಯವನ್ನೂ ಕರುಣೆಯನ್ನೂ ನಂಬಿಕೆಯನ್ನೂ ಬಿಟ್ಟುಬಿಟ್ಟಿರಿ. ಇವುಗಳನ್ನು ಮಾಡಬೇಕಾಗಿತ್ತು; ಅವುಗಳನ್ನೂ ಬಿಡಬಾರದು. [24]ದಾರಿತೋರಿಸುವ ಕುರುಡರೇ, ನೀವು ಸೊಳ್ಳೇ ಸೋಸುವವರು, ಒಂಟೇ ನುಂಗುವವರು.**

**ವಚನ 23.** ನಾಲ್ಕನೆ **ವಿಪತ್ತು** ದಶಮಾಂಶವನ್ನು ಕೊಡುವದನ್ನು ಒಳಗೊಂಡಿದೆ. ದಶಮಾಂಶವನ್ನು ಕೊಡುವದೆಂದರೆ **ಹತ್ತರಲ್ಲೊಂದು ಪಾಲು** ಕೊಡುವದಾಗಿದೆ. ಸತ್ಯವೇದದಲ್ಲಿ ದಶಮಾಂಶದ ಮೊದಲ ಉಲ್ಲೇಖವು ಅಬ್ರಾಹಾಮನು, ಸಾಲೇಮಿನ ಅರಸನು, ಯೆರೂಸಲೇಮಿಗೆ ಇರುವ ಪ್ರಾಚೀನ ಹೆಸರು, ಮತ್ತು ಮಹಾಯಾಜಕನು ಆದ ಮೆಲ್ಕಿಜೇದೆಕನಿಗೆ ಕೊಡುವದಾಗಿದೆ (ಆದಿಕಾಂಡ 14:18-20). ಧರ್ಮಶಾಸ್ತ್ರದಲ್ಲಿ ದಶಮಾಂಶದ ನಿಯಮಗಳು ಜಟಿಲವಾಗಿವೆ. ಸುಮಾರು ಮೂರು ವಿದಧ ದಶಮಾಂಶಗಳು ಅಸ್ತಿತ್ವದಲ್ಲಿವೆ ಎಂದು ಕೆಲವರು ನಂಬುತ್ತಾರೆ. ದೇವರು ಇಸ್ರಾಯೇಲ್ಯರಿಗೆ ಭೂಮಿಯ ಬೆಳೆಯ ಮತ್ತು ಹಣ್ಣುಗಳ ಹತ್ತರಲ್ಲೊಂದು ಪಾಲನ್ನು ಮತ್ತು ಹಿಂಡುಗಳಲ್ಲಿ ಮತ್ತು ಮಂದೆಯಲ್ಲಿ ತನಗಾಗಿ ಪರಿಶುದ್ಧವಾದವುಗಳೆಂದು ಪ್ರತ್ಯೇಕಿಸಿ ಇಡಬೇಕೆಂದು ಹೇಳುತ್ತಾನೆ (ಯಾಜಕಕಾಂಡ 27:30-33). ಈ ಅಭ್ಯಾಸವು ದೇವರನ್ನು ಭೂಮಿಯ ಒಡೆಯನೆಂದು ಮತ್ತು ಸಂಪತ್ತನ್ನು ಹಂಚುವಾತನೆಂದು ಗುರುತಿಸಲಾಗುತ್ತಿತ್ತು (ಯಾಜಕಕಾಂಡ 25:23; ಧರ್ಮೋಪದೇಶಕಾಂಡ 8:17, 18). ದಶಮಾಂಶವನ್ನು ಲೇವಿಯರಿಗೆ ಗುಡಾರದಲ್ಲಿ ನಂತರ ದೇವಾಲಯದಲ್ಲಿ ಅವರು ಮಾಡುವ ಸೇವೆಗಾಗಿ ಕೊಡಬೇಕಾಗಿತ್ತು (ಅರಣ್ಯಕಾಂಡ 18:21-24).[15] ಇತರ ವಾಕ್ಯಭಾಗಗಳು ದಶಮಾಂಶವನ್ನು ಆರಾಧಕರು ಮತ್ತು ದೇವರು ತನ್ನ ಹೆಸರನ್ನು ಇಟ್ಟಿರುವ ಸ್ಥಳದಲ್ಲಿರುವ ಲೇವಿಯರ ಮಧ್ಯದಲ್ಲಿ ಹಂಚಿಕೊಳ್ಳಬೇಕು ಎಂದು ಹೇಳುತ್ತವೆ (ಧರ್ಮೋಪದೇಶಕಾಂಡ 12:5-19; 14:22, 23), ಈ ವಸ್ತುಗಳನ್ನು ಸಾಗಕಳುಹಿಸಲು ಇಸ್ರಾಯೇಲರು ಬಹಳ ದೂರದಲ್ಲಿದ್ದ ಪಕ್ಷದಲ್ಲಿ, ಅವನು ಅವುಗಳನ್ನು ಮಾರಿ, ಹಣವನ್ನು ಯೆರೂಸಲೇಮಿಗೆ ತೆಗೆದುಕೊಂಡು ಬರಬೇಕು ಮತ್ತು ಅಲ್ಲಿ ಅವಶ್ಯವಿರುವ ವಸ್ತುಗಳನ್ನು ಖರೀದಿಸಬೇಕು (ಧರ್ಮೋಪದೇಶಕಾಂಡ 14:24-27). ಪ್ರತಿ ಮೂರು ವರ್ಷಗಳಿಗೊಮ್ಮೆ, ತನ್ನ ಸ್ವಂತ ಸ್ಥಳದಲ್ಲಿ ದಶಮಾಂಶವನ್ನು ಸಂಗ್ರಹಿಸಿಡಬೇಕು. ಅದನ್ನು ಲೇವಿಯರು, ಅನಾಥರು, ವಿಧವೆಯರು ಮತ್ತು ಅಲ್ಲಿ ವಾಸಿಸುವ ಪರದೇಶಿಯರನ್ನು ಬೆಂಬಲಿಸಲು ಉಪಯೋಗಿಸಬೇಕು (ಧರ್ಮೋಪದೇಶಕಾಂಡ 14:28, 29; 26:12).

**ಪ್ರತಿದಿನ ನೀವು ಮರುಗ, ಸೋಪು, ಜೀರಿಗೆಗಳಲ್ಲಿ** ಪ್ರತಿದಿನ ಉಪಯೋಗಿಸುವ ಮಸಾಲೆ ಸಾಮಾನುಗಳಾಗಿವೆ. ಯೆಶಾಯನ ಪ್ರಕಾರ ಒಕ್ಕಲಿಗರು, “ಸಬ್ಬನಿ ಬಿತ್ತಿ ಜೀರಿಗೆಯನ್ನು ಚೆಲ್ಲುವನು” (ಯೆಶಾಯ 28:25). ಈ ಮಸಾಲೆ ಸಾಮಾನುಗಳು ದಶಮಾಂಶದ ನಿಯಮಗಳಿಗೆ ಒಳಪಟ್ಟಿವೆ ಇವುಗಳನ್ನು ಸಹ ಬಿತ್ತಿದ್ದರಲ್ಲಿ “ಭೂಮಿಯಿಂದುಂಟಾದ ಆದಾಯ” ಎಂದು ಪರಿಗಣಿಸಿ ದಶಮಾಂಶವನ್ನು ನೀಡುವದು ಅವಶ್ಯವಾಗಿದೆ (ಯಾಜಕಕಾಂಡ 27:30; ಧರ್ಮೋಪದೇಶಕಾಂಡ 14:22).[16] ಫರಿಸಾಯರು ಸಣ್ಣ ಎಲೆಗಳನ್ನು ಮತ್ತು ಸಣ್ಣ ಬೀಜ

ಗಳನ್ನು ಲೆಕ್ಕಮಾಡುವದರಲ್ಲಿ ಅತಿಜಾಗರೂಕತೆ ವಹಿಸುತ್ತಿದ್ದರು. ಯೇಸು ತನ್ನ ಒಂದು ಸಾಮ್ಯದಲ್ಲಿ, ಫರಿಸಾಯರು "ನಾನು ಸಂಪಾದಿಸುವ *ಎಲ್ಲಾದರಲ್ಲಿಯೂ* ಹತ್ತರಲ್ಲೊಂದು ಪಾಲು ಕೊಡುತ್ತೇನೆ" ಎಂದು ಹೇಳಿದನು (ಲೂಕ 18:12; ಒತ್ತಿ ಹೇಳಿರುವದು ಕೂಡಿದೆ). ಇನ್ನೊಂದೆಡೆ ಯೇಸು ಹೇಳಿದ್ದು, "ನೀವು ಮರುಗ ಸದಾಪು ಮುಂತಾದ ಸಕಲ ಪಲ್ಯಗಳಲ್ಲಿ ಹತ್ತರಲ್ಲೊಂದು ಪಾಲು ಕೊಡುತ್ತೀರಿ" ಎಂದು ಹೇಳಿದನು (ಲೂಕ 11:42).[17] ಪ್ರತಿಯೊಂದು ವಿವರವನ್ನು ಗಮನಿಸುವದು ಅವರನ್ನು ನೀತಿವಂತರನ್ನಾಗಿ ಕಾಣುವಂತೆ ಮಾಡುತಿತ್ತು.

ಫರಿಸಾಯರು ಈ ಸಣ್ಣ ಸಣ್ಣ ಸಂಗತಿಗಳಲ್ಲಿ ನಂಬಿಸ್ತರಾಗಿದ್ದರೂ ಅವರು **ಧರ್ಮ ಶಾಸ್ತ್ರದಲ್ಲಿ ಗೌರವವಾದ್ದನ್ನು, ಅಂದರೆ ನ್ಯಾಯವನ್ನೂ ಕರುಣೆಯನ್ನೂ ನಂಬಿಕೆಯನ್ನೂ ಬಿಟ್ಟುಬಿಟ್ಟಿರಿ.** ಈ ಸನ್ನಿವೇಶದಲ್ಲಿ "ತೂಕವುಳ್ಳ" (*barus*) ಎಂಬ ಪದವು ಕಠಿಣ ಎನ್ನುವದಕ್ಕಿಂತ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ.[18] ಈ ರೀತಿಯ ಭಾಷೆಯು ಯೆಹೂದ್ಯರಿಗೆ ಚಿರಪರಿಚಿತವಾಗಿತ್ತು ಯಾಕೆಂದರೆ ರಬ್ಬಿಗಳು ಧರ್ಮಶಾಸ್ತ್ರವನ್ನು ಹಗುರವಾದ ಮತ್ತು ಬಾರವಾದ ವಿಭಾಗಗಳಲ್ಲಿ ವಿಭಾಗಿಸಿದ್ದರು (ನೋಡಿರಿ 5:19ರ ಮೇಲಿನ ವ್ಯಾಖ್ಯಾನ).[19] ತೂಕವುಳ್ಳ ಸೌಲಭ್ಯ ನ್ಯಾಯವನ್ನು ಒಳಗೊಂಡಿತ್ತು (ಯೆಶಾಯ 1:7; ಯೆರೆಮಿಯ 22:3; ಮೀಕ 6:8), **ಕರುಣೆಯನ್ನೂ** (ಹೋಶೆಯ 6:6; ಜೆಕರ್ಯ 7:9, 10), ಮತ್ತು **ನಂಬಿಕೆಯನ್ನೂ** (ಹಬಕ್ಕೂಕ 2:4) ಒಳಗೊಂಡಿದ್ದವು. ಇನ್ನೊಂದು ಸಂದರ್ಭದಲ್ಲಿ, ಯೇಸು "ಅವರು ನ್ಯಾಯ ಮತ್ತು ದೇವರ ಪ್ರೀತಿಗೆ" ಅಗೌರವವನ್ನು ತಂದಿದ್ದಾರೆಂದು ಹೇಳುತ್ತಾನೆ (ಲೂಕ 11:42). ಅವರು **ಇತರರನ್ನು ಅಸಡ್ಡೆ ಮಾಡದೆ** ಹೆಚ್ಚು **ಬಹಳ ಮುಖ್ಯವಾದ** ಈ ಸಂಗತಿಗಳನ್ನು ಮಾಡಬೇಕಾಗಿತ್ತು ಎಂದು ಒತ್ತಿ ಹೇಳಿದನು.

**ವಚನ 24.** ಯೇಸು ಪುನಃ, ಫರಿಸಾಯರನ್ನು **ದಾರಿತೋರಿಸುವ ಕುರುಡರೇ** ಎಂದು ಸಂಬೋಧಿಸುತ್ತಾನೆ (ನೋಡಿರಿ 23:16). ಅವರು ಸೂಕ್ಷ್ಮವಾದವುಗಳ ಮೇಲೆ ಕೇಂದ್ರಿಕರಿಸಿ ಪ್ರಾಮುಖ್ಯವಾದ ಸಂಗತಿಗಳನ್ನು ಅಲಕ್ಷಿಸುವದನ್ನು **ಸೊಳ್ಳೇ ಸೋಸುವವರು, ಒಂಟೇ ನುಂಗುವವರು** ಎಂದು ಹೇಳುವದರ ಮೂಲಕ ಪ್ರದರ್ಶಿಸುತ್ತಾನೆ. ಕರ್ತನು ಇಂಥಹಾ ಅತಿರೇಕಗಳನ್ನು ಉಪಯೋಗಿಸುವದರಲ್ಲಿ ಆಸಕ್ತಿಯುಳ್ಳವನಾಗಿದ್ದಾನೆ (7:3, 4; 13:31, 32; 17:20; 19:24). ಸೊಳ್ಳೇ ಒಂದು ಚಿಕ್ಕ ಹುಳುವಾಗಿದೆ, ಇದನ್ನು ಪಾಲೇಸ್ತಿನ ದೇಶದಲ್ಲಿ ಅತಿ ದೊಡ್ಡದಾದ ಒಂಟೆಯೊಂದಿಗೆ ವ್ಯತ್ಯಾಸ ತೋರಿಸಲಾಗಿದೆ. ಆತನ ಈ ಹೋಲಿಕೆ ನಾಣ್ಣುಡಿಯ ರೂಪದಲ್ಲಿದೆ,[20] ಅರೆಮಿಕ್ ಪದಗಳ ಆಟವನ್ನು ಒಳಗೊಂಡಿದೆ. ಸೊಳ್ಳೆ (*qalma'*) ಅಥವಾ (*qamla'*) ಎಂಬ ಪದಕ್ಕೆ ಅಥವಾ "ಒಂಟೆ" ಎನ್ನುವ ಶಬ್ದಕ್ಕೆ (*gamla'*) ಉಪಯೋಗಿಸಿರುವ ಸಾಧ್ಯತೆ ಇದೆ.[21] ಸೊಳ್ಳೆ ಮತ್ತು ಒಂಟೆ ಎರಡು ಸಾಂಪ್ರದಾಯಿಕವಾಗಿ ಅಶುದ್ಧವಾಗಿವೆ ಮತ್ತು ತಿನ್ನುವದಕ್ಕೆ ನಿಷೇಧವಾಗಿದೆ (ಯಾಜಕರು 11:4, 20-23, 41-43). ಫರಿಸಾಯರು ತಮ್ಮ ದ್ರಾಕ್ಷಾರಸದಿಂದ ಅಶುದ್ಧ ಕ್ರಿಮಿಗಳನ್ನು ಮತ್ತು ಹುಳುಗಳನ್ನು ಸೋಸುವದಕ್ಕೆ ಬಟ್ಟೆಗಳನ್ನು ಮತ್ತು ಚಿಕ್ಕ ಬುಟ್ಟಿಗಳನ್ನು ಉಪಯೋಗಿಸುತ್ತಿದ್ದರು.[22] ಅವರು ಸಣ್ಣ ಪ್ರಮಾಣದ ಅಶುದ್ಧತೆ ಯನ್ನು ದೂರವಿರಿಸಲು ಪ್ರಯತ್ನಿಸುವಾಗ, ಅದಕ್ಕೆ ಬದಲಾಗಿ ಅವರು ದೊಡ್ಡದರೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಾರೆ ಎಂದು ಯೇಸು ಹೇಳುತ್ತಾನೆ.

## ಐದನೇ ವಿಪತ್ತು (23:25, 26)

**25ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಪಂಚಪಾತ್ರೆ ಬಟ್ಟಲು ಇವುಗಳ ಹೊರಭಾಗವನ್ನು ಶುಚಿಮಾಡುತ್ತೀರಿ; ಆದರೆ ಅವು ಒಳಗೆ ಸುಲುಕೊಂಡವುಗಳಿಂದಲೂ ಇಹಭೋಗಪದಾರ್ಥಗಳಿಂದಲೂ ತುಂಬಿರುತ್ತವೆ. 26ಕುರುಡನಾದ ಫರಿಸಾಯನೇ, ಮೊದಲು ಪಂಚಪಾತ್ರೆ ಬಟ್ಟಲುಗಳ ಒಳಭಾಗವನ್ನು ಶುಚಿಮಾಡು, ಆಗ ಅವುಗಳ ಹೊರಭಾಗವೂ ಶುಚಿಯಾಗುವದು.**

**ವಚನ 25.** ಐದನೇ **ವಿಪತ್ತಿ**ನಲ್ಲಿ ಯೇಸು ಯೆಹೂದಿ ನಾಯಕರನ್ನು ಟೀಕಿಸುತ್ತಾನೆ ಯಾಕೆಂದರೆ ಅವರು **ಪಂಚಪಾತ್ರೆ ಬಟ್ಟಲು ಇವುಗಳ ಹೊರಭಾಗವನ್ನು ಶುಚಿಮಾಡುತ್ತೀರಿ;** ಆದರೆ ಒಳಭಾಗವನ್ನು ಅಲಕ್ಷ ಮಾಡುತ್ತಾರೆ. ಯೆಹೂದ್ಯರು ತಮ್ಮನ್ನು ಮತ್ತು ತಾವು ಊಟಮಾಡುವ ಪಾತ್ರೆಗಳನ್ನು ಸಾಂಪ್ರದಾಯಿಕವಾಗಿ ತೊಳೆಯುವದರಲ್ಲಿ ತೊಡಗಿಸಿಕೊಂಡಿದ್ದರು (15:1-20; ಮಾರ್ಕ 7:1-8). ಅವರು ಬಟ್ಟಲುಗಳ ಒಳಗಿನ ಭಾಗ ಮತ್ತು ಹೊರಗಿನ ಭಾಗವನ್ನು ಶುದ್ಧಗೊಳಿಸುವದನ್ನು ವಿಂಗಡಿಸಿದ್ದರು.[23] ಯೇಸು ಈ ಹಿನ್ನೆಲೆಯನ್ನು ಉಪಯೋಗಿಸಿ **ಶಾಸ್ತ್ರಿಗಳ ಮತ್ತು ಫರಿಸಾಯರ** ಹೃದಯದ ಸ್ಥಿತಿಯನ್ನು ಪ್ರದರ್ಶಿಸುತ್ತಾನೆ. ಇದು ಆತನ ಸ್ಪಷ್ಟವಾದ ದೂರಿನಲ್ಲಿ ಪ್ರಕಟವಾಗಿದೆ: **ಅವು ಒಳಗೆ ಸುಲುಕೊಂಡವುಗಳಿಂದಲು ಇರಭೋಗ ಪದಾರ್ಥಗಳಿಂದಲೂ ತುಂಬಿರುತ್ತವೆ.** ಬಟ್ಟಲು ಅಥವಾ ಪಾತ್ರೆ "ಸುಲುಕೊಂಡವುಗಳು ಮತ್ತು ಇಹಬೋಗ ಪದಾರ್ಥಗಳಿಂದ ತುಂಬಿರಲು ಸಾಧ್ಯವಿಲ್ಲ." ಆದರೆ ಜನರು ಹೀಗಿರಲು ಸಾಧ್ಯ (15:18, 19). ಈ ನಾಯಕರುಗಳು ತಮ್ಮ ಸ್ವಂತ ಆಂತರ್ಯದ ಆತ್ಮೀಕ ಸ್ಥಿತಿಗಿಂತ ಹೊರಗಿನ ಆಚರಣೆಯ ಶುದ್ಧೀಕರಣದಲ್ಲಿ ಹೆಚ್ಚು ಆಸಕ್ತಿಯುಳ್ಳವರಾಗಿದ್ದಾರೆ. ಫರಿಸಾಯರು ತಮ್ಮ ಆಚಾರದ ಸ್ನಾನದಲ್ಲಿ ಹೆಚ್ಚು ಜಾಗ್ರತೆಯುಳ್ಳವರಾಗಿದ್ದಾರೆ ಆದರೆ ಅವರು ಲೋಭಿಗಳಾಗಿದ್ದಾರೆ, "ಹಣವನ್ನು ಪ್ರೀತಿಸುವವರಾಗಿದ್ದಾರೆ" (ಲೂಕ 16:14). ಸ್ವಯಿಚ್ಛೆಯನ್ನು ತೃಪ್ತಿಗೊಳಿಸುವದು (*akrasia*) ಎಂಬ ಪದಕ್ಕೆ ಗ್ರೀಕ್ ಪದ ಇದನ್ನು ಲೈಂಗಿಕ ಅನೈತಿಕತೆಗೆ ಸಹ ಉಲ್ಲೇಖಿಸ ಬಹುದಾದ ಶಬ್ದವು (1 ಕೊರಿಂಥ 7:5). ಬಟ್ಟಲಿನ ಕಲ್ಪನೆಗೆ ಜೋಡಿಸಬಹುದು, ಆದರೂ, ಅವರು ದ್ರಾಕ್ಷಾರಸವನ್ನು ಅತಿಯಾಗಿ ಸೇವಿಸುವದನ್ನು ಸೂಚಿಸುತ್ತದೆ.

**ವಚನ 26.** ಯೇಸು ಅವರ ಪಾಪಗಳಿಗೆ ಮತ್ತು ಅತೀಯಾದ ಸಂಗತಿಗಳಿಗೆ ಉಪಾಯವನ್ನು ನೀಡುತ್ತಾನೆ: **ಮೊದಲು ಪಂಚಪಾತ್ರೆ ಬಟ್ಟಲುಗಳ ಒಳಭಾಗವನ್ನು ಶುಚಿಮಾಡು, ಆಗ ಅವುಗಳ ಹೊರಭಾಗವೂ ಶುಚಿಯಾಗುವದು.** ಲೂಕನ ಸುವಾರ್ತೆಯಲ್ಲಿ, ಆತನು ಹೀಗೆ ಹೇಳಿದ್ದಾನೆ, "ಹೇಗೂ ಒಳಗಿರುವಂಥದ್ದನ್ನು ದಾನಾಕೊಡಿರಿ; ಆಗ ಸಕಲವೂ ನಿಮಗೆ ಶುದ್ಧವಾಗಿರುವದು" (ಲೂಕ 11:41).

## ಆರನೆ ವಿಪತ್ತು (23:27, 28)

**[27]ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಸುಣ್ಣಾ ಹಚ್ಚಿದ ಸಮಾಧಿಗಳಿಗೆ ಹೋಲಿಕೆಯಾಗಿದ್ದೀರಿ; ಇವು ಹೊರಗೆ ಚಂದವಾಗಿ ಕಾಣುತ್ತವೆ. ಒಳಗೆ ನೋಡಿದರೆ ಸತ್ತವರ ಎಲುಬುಗಳಿಂದಲೂ ಎಲ್ಲಾ ಹೊಲಸಿನಿಂದಲೂ ತುಂಬಿರುತ್ತವೆ. [28]ಹಾಗೆಯೇ ನೀವು ಸಹ ಹೊರಗೆ ಜನರಿಗೆ ಸತ್ಪುರುಷರಂತೆ ಕಾಣಿಸಿಕೊಳ್ಳುತ್ತೀರಿ ಸರಿ, ಆದರೆ ಒಳಗೆ ಕಪಟದಿಂದಲೂ ಅನ್ಯಾಯದಿಂದಲೂ ತುಂಬಿದವರಾಗಿದ್ದೀರಿ.**

**ವಚನ 27.** ಆರನೆ **ವಿಪತ್ತು** ಅಂತರಂಗದ ನೈಜತೆಯೊಂದಿಗೆ ಹೊರಗಿನ ತೋರಿಕೆ ನಿರಂತರವಾದ ವಿರೋಧವನ್ನು ಹೊಂದಿದೆ. **ಶಾಸ್ತ್ರಿಗಳೇ, ಫರಿಸಾಯರೇ, ನೀವು ಸುಣ್ಣಾ ಹಚ್ಚಿದ ಸಮಾಧಿಗಳಿಗೆ ಹೋಲಿಕೆಯಾಗಿದ್ದೀರಿ.** ಯೆರೂಸಲೇಮಿನಿಂದ ಆಚೆಯಲ್ಲಿರುವ ಆಲೀವ್ ಬೆಟ್ಟದ ಕೆಳಗಿನ ಭಾಗವು ಕೆಲವು ಪ್ರಾಚೀನ ಸಮಾಧಿಗಳಿಂದ ಕೂಡಿದ ಸ್ಥಳವಾಗಿದೆ. ಹೊಸ ಒಡಂಬಡಿಕೆಯಲ್ಲಿ ಇಂಥಹಾ ಸಮಾಧಿಗಳನ್ನು ಪ್ರತಿ ವರ್ಷ Adarನ ಹದಿನೈದನೆಯ ದಿನಕ್ಕೆ (February/March)[24] ತಿಂಗಳಿನ ಹದಿನೈದನೆಯ ದಿನದ ಸುಮಾರು ಸುಣ್ಣ ಹಚ್ಚುತ್ತಿದ್ದರು. ಇದನ್ನು ಪ್ರತಿವರ್ಷ ಮಾಡುತ್ತಿದ್ದರು ಯಾಕೆಂದರೆ ಮಳೆಗಾಲದಲ್ಲಿ ಸುಣ್ಣವು ತೊಳೆದುಕೊಂಡು ಹೋಗುತಿತ್ತು (ನೋಡಿರಿ ಯೆಹೆಜ್ಕೇಲ 13:10-12). ಸಮಾಧಿಗಳಿಗೆ ಸುಣ್ಣ ಹಚ್ಚುವದರಿಂದ ಪಸ್ಕಹಬ್ಬ ಮತ್ತು ಪಂಚಾಶತ್ತಮ[25] ಹಬ್ಬಕ್ಕೆ ಯೆರೂಸಲೇಮಿಗೆ ಹೋಗುವ ಯಾತ್ರಿಕರಿಗೆ

ಪಟ್ಟಣವು ಆಕರ್ಷಣೀಯವಾಗಿ ಕಾಣುತಿತ್ತು. ಇದರೊಟ್ಟಿಗೆ, ಅದು ಯಾತ್ರಿಕರು ಅಲಕ್ಷತನದಿಂದ ಸಮಾಧಿಯನ್ನು ಮುಟ್ಟುವದನ್ನು ತಪ್ಪಿಸುತಿತ್ತು (ಲೂಕ 11:44). ಹೀಗೆ ಅವುಗಳನ್ನು ಮುಟ್ಟುವದರಿಂದ ಅವರು ಏಳು ದಿನಗಳವರೆಗೆ ಅಶುದ್ಧರಾಗುತ್ತಿದ್ದರು (ಅರಣ್ಯಕಾಂಡ 19:16) ಮತ್ತು ಹಬ್ಬದ ಉತ್ಸವಗಳಲ್ಲಿ ಭಾಗವಹಿಸಲು ಅನರ್ಹರಾಗುತ್ತಿದ್ದರು (ನೋಡಿರಿ ಯೋಹಾನ 11:55; 18:28). ಈ ಸುಂದರವಾದ ಸಮಾಧಿಗಳನ್ನು ಯೇಸು **ಒಳಗೆ ನೋಡಿದರೆ ಸತ್ತವರ ಎಲುಬುಗಳಿಂದಲೂ ಎಲ್ಲಾ ಹೊಲಸಿನಿಂದಲೂ ತುಂಬಿರುತ್ತವೆ** ಎಂದು ಸೂಚಿಸಿದನು.

**ವಚನ 28.** ಯೇಸು ಈ ಕಲ್ಪನೆಯನ್ನು ಶಾಸ್ತ್ರಿಗಳು ಮತ್ತು ಫರಿಸಾಯರಿಗೆ ಅನ್ವಹಿಸಿದನು: **ಹಾಗೆಯೇ ನೀವು ಸಹ ಹೊರಗೆ ಜನರಿಗೆ ಸತ್ಪುರುಷರಂತೆ ಕಾಣಿಸಿ ಕೊಳ್ಳುತ್ತೀರಿ ಸರಿ, ಆದರೆ ಒಳಗೆ ಕಪಟದಿಂದಲೂ ಅನ್ಯಾಯದಿಂದಲೂ ತುಂಬಿದವರಾಗಿದ್ದೀರಿ.** ಅವರು ತಮ್ಮ ಹಣೆ ಪಟ್ಟಿಗಳನ್ನು ಅಗಲ ಮಾಡಿಕೊಳ್ಳುತ್ತಿದ್ದರು ಮತ್ತು ತಮ್ಮ ಗೊಂಡೆಗಳನ್ನು ಉದ್ದ ಮಾಡಿಕೊಳ್ಳುತ್ತಿದ್ದರು (23:5), "ಮನುಷ್ಯರಿಗೆ ನೀತಿಯುಳ್ಳವರಾಗಿ" ಕಾಣಿಸಿಕೊಳ್ಳುತ್ತಿದ್ದರು; ಆದರೆ ಅವರ ಹೃದಯಗಳು ಭ್ರಷ್ಟವಾಗಿದ್ದವು. William Hendriksen ರವರು "ಅನ್ಯಾಯ" ಇಲ್ಲಿ "ನಿಯಮಗಳಿಲ್ಲದೇ ಇರುವದಲ್ಲ ಬದಲಾಗಿ ದೇವರ ಧರ್ಮಶಾಸ್ತ್ರವನ್ನು ತಿರಸ್ಕರಿಸುವದಾಗಿದೆ" ಎಂದು ಅಭಿಪ್ರಾಯಪಡುತ್ತಾರೆ.[26]

ಇದಕ್ಕೆ ಸಂಬಂಧಿಸಿದ Talmudನಲ್ಲಿರುವ ಕಥೆ ಗುರುವಾದ ಗಮಲಿಯೇಲನು ಪ್ರಕಟನೆಗಳನ್ನು ನೀಡುತ್ತಾ ಹೇಳುತ್ತಾನೆ, "ಯಾವುದೇ ಶಿಷ್ಯನ ಗುಣಲಕ್ಷಣ ತನ್ನ ಹೊರಗಿನ ತೋರಿಕೆಗೆ ಹೋಲಿಕೆಯಾಗುವದಿಲ್ಲವೋ ಅವನು Beth ha-Midrash ಪ್ರವೇಶಿಸಬಹುದು." ಮುಂದೆ ಎಲ್ಲಾ ವಿದ್ಯಾರ್ಥಿಗಳು ಶಾಲೆಯಲ್ಲಿ ಸ್ವಿಕರಿಸಲ್ಪಟ್ಟರು, ಮತ್ತು ನೂರಾರು ಸ್ಥಾನಗಳು ಸೇರ್ಪಡೆಯಾದವು. ಗಮಲಿಯೇಲನು ಎಚ್ಚರಗೊಂಡನು, ತಾನು ನಿಯಮಗಳನ್ನು ಅನುಸರಿಸುವ ಅನೇಕ ಯೋಗ್ಯರಾದ ಯೌವನಸ್ಥರಿಗೆ ವಂಚಿಸಿದ್ದೇನೆ ಎಂದು ಯೋಚಿಸ ತೊಡಗಿದನು. ಆದರೂ, ಅವನು ಕನಸಿನಲ್ಲಿ ಬೂದಿಯಿಂದ ತುಂಬಿದ ಬಿಳಿನಿಲುವಂಗಿ, ವರ್ಗಕೋಣೆಯಲ್ಲಿ ಹಾಜರಾಗದಿರುವವರು ಯಥಾರ್ಥರಾಗಿರುವವರಿಗಿಂತ ಕಡಿಮೆ ಸಂಖ್ಯೆಯಲ್ಲಿದ್ದಾರೆಂದು ಸೂಚಿಸುವದನ್ನು ನೋಡಿ ಮರಳಿ ಭರವಸವನ್ನು ಹೊಂದಿದನು.[27]

## ಏಳನೆ ವಿಪತ್ತು (23:29-33)

**[29]ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಪ್ರವಾದಿಗಳ ಸಮಾಧಿಗಳನ್ನು ಕಟ್ಟಿ, [30]ನೀತಿವಂತರ ಗೋರಿಗಳನ್ನು ಅಲಂಕರಿಸಿ - ನಾವು ನಮ್ಮ ಹಿರಿಯರ ಕಾಲದಲ್ಲಿ ಇರುತ್ತಿದ್ದರೆ ಪ್ರವಾದಿಗಳನ್ನು ಕೊಂದ ಪಾಪದಲ್ಲಿ ಪಾಲುಗಾರರಾ ಗುತ್ತಿರಲಿಲ್ಲ ಅನ್ನುತ್ತೀರಿ. [31]ಹಾಗಾದರೆ ನೀವು ಪ್ರವಾದಿಗಳನ್ನು ಕೊಂದವರ ಮಕ್ಕಳೇ ಹೌದು ಎಂಬುದಕ್ಕೆ ನಿಮಗೆ ನೀವೇ ಸಾಕ್ಷಿಗಳಾಗಿದ್ದೀರಿ. [32]ಒಳ್ಳೇದು, ನೀವು ನಿಮ್ಮ ಹಿರಿಯರ ಪಾಪದ ಅಳತೆಯನ್ನು ಪೂರ್ತಿಮಾಡಿರಿ. [33]ಹಾವುಗಳೇ, ಸರ್ಪಜಾತಿಯವರೇ, ನರಕದಂಡನೆಗೆ ಹೇಗೆ ತಪ್ಪಿಸಿಕೊಂಡೀರಿ?**

**ವಚನ 29.** ಏಳನೆಯ **ವಿಪತ್ತಿನ**ಲ್ಲಿ ಸಹ ಸಮಾಧಿಯ ಕಲ್ಪನೆ ಮುಂದುವರೆಯುತ್ತದೆ. **ನೀವು ಪ್ರವಾದಿಗಳ ಸಮಾಧಿಗಳನ್ನು ಕಟ್ಟಿ, ನೀತಿವಂತರ ಗೋರಿಗಳನ್ನು ಅಲಂಕರಿಸಿ.** ಇದನ್ನು ಕೆಲವೊಬ್ಬರು ಒಂದೇ ಸಂಗತಿಯನ್ನು ಎರಡು ವಿಧದಲ್ಲಿ ನೋಡುವದಾಗಿದೆ: "ಸಮಾಧಿಗಳು" "ಗೋರಿಗಳಿಗೆ" ಸಮಾನವಾಗಿವೆ, ಮತ್ತು "ಪ್ರವಾದಿಗಳು" "ನೀತಿವಂತರಿಗೆ" ಸಮಾನರಾಗಿ ದ್ದಾರೆ. ಇನ್ನಿತರರು ಸಮಾನವಾಗಿರುವ ಪದಗಳು ಅರ್ಥದಲ್ಲಿ ಸ್ವಲ್ಪ ವ್ಯತ್ಯಾಸವಾಗಿವೆ ಎಂದು ಯೋಚಿಸುತ್ತಾರೆ. ಇದನ್ನು ನಿರ್ಧರಿಸುವದು ಕಷ್ಟವಾಗಿದೆ ಯಾಕೆಂದರೆ ಗ್ರೀಕ್ ಶಬ್ದ *mnēmeion* ಎಂದರೆ "ಸ್ಮಾರಕ, ನೆನಪಿನ" ಅಥವಾ "ಸಮಾಧಿ, ಗೋರಿ."[28] ಇದರೊಟ್ಟಿಗೆ, "ಪ್ರವಾದಿಗಳು"

ನಿಶ್ಚಯವಾಗಿಯೂ "ನೀತಿವಂತರಾಗಿರುವಾಗ" "ನೀತಿವಂತರೆಂಬ" ಪದವು ದೇವರನ್ನು ನಂಬಿಗಸ್ತಿಕೆಯಿಂದ ಸೇವೆ ಮಾಡಿದ ಜನರನ್ನು ಉಲ್ಲೇಖಿಸುವ ಸಾಧ್ಯತೆ ಇದೆ (ನೋಡಿರಿ 10:41ರ ಮೇಲಿನ ವ್ಯಾಖ್ಯಾನ).

W. F. Albright ಮತ್ತು C. S. Mannರವರ ಪ್ರಕಾರ, "ಪ್ರವಾದಿಗಳನ್ನು ಪೂಜ್ಯ ಭಾವದಿಂದ ನೋಡುವದು ಅವರ ಸಮಾಧಿಗಳಿಗೆ ಗೌರವದಿಂದ ಪ್ರಾರ್ಥಿಸುವದು ಯೇಸುವಿನ ಸಮಯದಲ್ಲಿ ಖಂಡಿತವಾಗಿಯೂ ಉತ್ತಮವಾಗಿ ಸ್ಥಾಪಿಸಲ್ಪಟ್ಟಿತು, ಅಲ್ಲದೇ ಪರಿಶುದ್ಧ ಮನುಷ್ಯರ ಗೋರಿಗಳನ್ನು ಸ್ಮಾರಕಗಳನ್ನು ಪೂಜಿಸುವದು ಸಂಪ್ರದಾಯವಾಗಿತ್ತು."[29] ಅಪೋ ಕೃಪಾದಲ್ಲಿ ನಂತರದ ಅಭ್ಯಾಸಗಳಿಗೆ ಒಡಂಬಡಿಕೆಗಳ ಮಧ್ಯದ ಅವಧಿಯಲ್ಲಿ ಸಾಕ್ಷಿಗಳಿವೆ. Simon Maccabee ರವರು ತಮ್ಮ ಕುಟುಂಬದ ಸದಸ್ಯರನ್ನು ಗೌರವಿಸುತ್ತಿದ್ದರು, ಇವರು ಯೆಹೂದ್ಯರನ್ನು ತಮ್ಮ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವತ್ತ ನಡೆಸಿದರು:

> [ಇವರು] ತಮ್ಮ ತಂದೆಯವರ ಮತ್ತು ತನ್ನ ಸಹೋದರರ ಸಮಾಧಿಯ ಮೇಲೆ ಒಂದು ಸ್ಮಾರಕವನ್ನು [Modein ನಲ್ಲಿ] ಕಟ್ಟಿಸಿದರು; ಅವರು ಅದನ್ನು ಎಲ್ಲರಿಗೂ ಕಾಣುವಂತೆ ಎತ್ತರವಾಗಿ ಕಟ್ಟಿದರು ಅದರ ಹಿಂದೆ ಮತ್ತು ಮುಂದೆ ಹೊಳೆಯುವ ಕಲ್ಲುಗಳನ್ನು ಜೋಡಿಸಿದರು. ಅವರು ಏಳು ಪಿರಮಿಡ್ಡುಗಳನ್ನು ಎದುರುಬದುರಾಗಿ ನಿರ್ಮಿಸಿದ್ದರು. ತನ್ನ ತಂದೆ ತಾಯಿ ಮತ್ತು ನಾಲ್ಕು ಸಹೋದರರ ಹೆಸರಿನಲ್ಲಿ. ಅವರು ನಿರ್ಮಿಸಿದ pyramidsಗಳು ವಿಶಾಲವಾಗಿದ್ದವು, ದೊಡ್ಡ ದೊಡ್ಡ ಕಂಬಗಳನ್ನು ನಿಲ್ಲಿಸಿದರು ಮತ್ತು ಕಂಬಗಳ ಮೇಲೆ ಶಾಶ್ವತವಾದ ಸ್ಮಾರಕವಾಗಿ ಆಯುಧಗಳನ್ನು ಹೊಂದಿಸಿದ್ದರು ಮತ್ತು ಆಯುಧಗಳ ಹೊಂದಿಕೆಯ ಮೇಲೆ ಹಡಗುಗಳನ್ನು ಕೆತ್ತಿದ್ದರು, ಇದರಿಂದಾಗಿ ಅವು ಸಮುದ್ರ ಪ್ರಯಾಣವಾಗಿ ಹೋಗುವವರಿಗೆಲ್ಲಾ ಕಂಡುಬರುತ್ತಿದ್ದವು.[30]

ಸ್ಮಾರಕಗಳನ್ನು ನಿರ್ಮಿಸುವದರ ಕುರಿತು ಇನ್ನೊಂದು ಉದಾಹರಣೆ ಯೋಸೇಫಸ್ ಅವರಿಂದ ಬರುತ್ತದೆ, ಅವರು ಅರಸನಾದ ಹೆರೋದನ ಕಥೆಯನ್ನು ಹೇಳುತ್ತಾರೆ, ಹೆರೋದನು ಬಂಗಾರದ ಪಿಠೋಪಕರಣಗಳಿರುವ ದಾವೀದನ ಗೋರಿಯನ್ನು ಲೂಟಿಮಾಡುತ್ತಾನೆ. ಎರಡನೇ ಪ್ರಯತ್ನದಲ್ಲಿ, ಹೆರೋದನು ಮತ್ತು ಆತನ ಮನುಷ್ಯರು ಸಮಾಧಿಯಲ್ಲಿ ಆಳವಾಗಿ ಒಳಗೆ ಹೋಗುವಾಗ ಮತ್ತು ದಾವೀದನ ಮತ್ತು ಸೊಲೊಮೋನನ ಅವಶೇಷಗಳನ್ನು ಸಂಧಿಸುವಾಗ ಅವನ ಇಬ್ಬರು ಕಾವಲುಗಾರರು ಬೆಂಕಿಯಿಂದ ಕೊಲಲ್ಪಟ್ಟರು. ಇದರ ಪರಿಣಾಮವಾಗಿ ಹೆರೋದನು ಬಹಳವಾಗಿ ಭಯಪಟ್ಟನು ಮತ್ತು "ಪ್ರಾಯಶ್ಚಿತ್ತಾರ್ಥಕ ಸ್ಮಾರಕವನ್ನು ಬಿಳಿಯ … ಶಿಲೆಯಿಂದ ಕಟ್ಟಿದನು ಮತ್ತು ಅದಕ್ಕಾಗಿ ಬಹಳ ಹಣವನ್ನು ವ್ಯಯಮಾಡಿದನು."[31]

ಹಲವು ಪ್ರಾಚೀನ ಸ್ಮಾರಕ ಸಮಾಧಿಗಳು ಇವತ್ತಿನವರೆಗೂ ಯೆರೂಸಲೇಮಿನಲ್ಲಿ ಇವೆ. ಅವು ಕಿದ್ರೋನ ಹಳ್ಳದಲ್ಲಿ ಸ್ಥಾಪಿತವಾಗಿವೆ: ಅಬ್ಷಾಲೋಮನ ಸಮಾಧಿ, ಜೆಕರ್ಯನ ಸಮಾಧಿ ಮತ್ತು Bene Hezirನ ಸಮಾಧಿಗಳಿವೆ. ಅದಾಗ್ಯೂ, ಅವುಗಳನ್ನು ಕಟ್ಟಿಸಿದ ದಿನಾಂಕವಾದ ವಿವಾದಕ್ಕೆ ಒಳಪಟ್ಟಿವೆ. ಮೊದಲಿನ ಎರಡು ಹೆಸರಿಲ್ಲ ಎಂದು ನಂಬಲಾಗಿದೆ; ಇದು ದಾವೀದನ ಮಗನಾದ ಅಬ್ಷಾಲೋಮನ ಅಥವಾ ಪ್ರವಾದಿಯಾದ ಜೆಕರ್ಯನನ್ನು ಈ ಸ್ಥಳದಲ್ಲಿ ಸಮಾಧಿ ಮಾಡಿರಬಹುದು ಎಂದು ಸಂಶಯಪಡುತ್ತಾರೆ.

**ವಚನ 30.** ಶಾಸ್ತ್ರಿಗಳು ಮತ್ತು ಫರಿಸಾಯರು ಪ್ರವಾದಿಗಳ ಸಮಾಧಿಗಳನ್ನು ಗೌರವಿಸುತ್ತಿದ್ದರು. ಸ್ಪಷ್ಟವಾಗಿ, ಅವರು ಸಹ, ನಾವು **ನಮ್ಮ ಹಿರಿಯರ ಕಾಲದಲ್ಲಿ** ಇರುತ್ತಿದ್ದರೆ **ಪ್ರವಾದಿಗಳನ್ನು ಕೊಂದ ಪಾಪದಲ್ಲಿ ಪಾಲುಗಾರರಾಗುತ್ತಿರಲಿಲ್ಲ ಅನ್ನುತ್ತೀರಿ** (ನೋಡಿರಿ 21:35, 36ರ ಮೇಲಿನ ವ್ಯಾಖ್ಯಾನ).

**ವಚನ 31.** ಅವರ ತಂದೆಗಳು ಪ್ರವಾದಿಗಳನ್ನು ಕೊಲೆ ಮಾಡಿದ್ದರು, ಅವರು ತಮ್ಮ ಸ್ವಂತ ದೋಷಕ್ಕೆ ಬಲಿಯಾಗಿದ್ದರು ಎಂದು ಯೇಸು ವಿವರಿಸಿದನು: **ಪ್ರವಾದಿಗಳನ್ನು ಕೊಂದವರ**

**ಮಕ್ಕಳೇ ಹೌದು ಎಂಬುದಕ್ಕೆ ನಿಮಗೆ ನೀವೇ ಸಾಕ್ಷಿಗಳಾಗಿದ್ದೀರಿ ಎಂದು ಹೇಳಿದನು.** ಕೊಲೆಪಾತಕರಾದ ಅವರ ತಂದೆಗಳ ರಕ್ತವೇ ಅವರ ಮೈಯಲ್ಲೂ ಹರಿಯುತ್ತಿದೆ ಮತ್ತು ಮುಂದೆ ನಡೆಯಲಿಕ್ಕಿರುವ ಘಟನೆಗಳು ಅವರು ತಮ್ಮ ತಂದೆಗಳ "ನಿಜವಾದ ಮಕ್ಕಳು" ಎಂಬುದು ಆ ವಾರದ ಕೊನೆಯಲ್ಲಿ ದೃಢವಾಗುತ್ತವೆ. ಕೆಲವು ದೈಹಿಕವಾಗಿ ಆ ಕೊಲೆಪಾತಕರ ವಂಶಜರಲ್ಲ ಅವರಲ್ಲಿ ಸಹ ಅದೇ ಆತ್ಮೀಕ ಪ್ರವೃತ್ತಿಯಿದೆ.

ಶಾಸ್ತ್ರಿಗಳ ಮತ್ತು ಫರಿಸಾಯರ ಕಪಟತನ ಸ್ಪಷ್ಟವಾಗಿದೆ. ಅದೇ ಸಮಯದಲ್ಲಿ ಅವರು ಪ್ರವಾದಿಗಳ ಕುರಿತು ಅವರ ಸಮಾಧಿಗಳನ್ನು ಪೂಜಿಸುವದರ ಮೂಲಕ ಹೊರಗಿನ ತೋರಿಕೆಯ ಗೌರವವನ್ನು ವ್ಯಕ್ತಪಡಿಸುತ್ತಿದ್ದರು, ಈ ಮನುಷ್ಯರು ಪ್ರವಾದಿಗಳ ಸಂಪ್ರದಾಯಕ್ಕೆ ದಕ್ಕೆ ತರುವವರನ್ನು ಭಯಂಕರವಾಗಿ ವಿರೋಧಿಸುತ್ತಿದ್ದರು - ಯೇಸು ಮತ್ತು ಆತನ ಶಿಷ್ಯರನ್ನು (21:37-39; 1 ಥೆಸಲೋನಿಕ 2:14-16).[32] ಸ್ತೇಫನನು ಮುಂದೆ ಆತನು ಸನ್ಹೇದ್ರಿನ್ ವಿರೋಧಿಸುವಾಗ ಇದೇ ಅಂಶವನ್ನು ಹೇಳುತ್ತಾನೆ: "ಪ್ರವಾದಿಗಳಲ್ಲಿ ನಿಮ್ಮ ಪಿತೃಗಳು ಹಿಂಸೆಪಡಿಸದವರು ಯಾರಿದ್ದಾರೆ? ಅವರು ನೀತಿ ಸ್ವರೂಪನ ಆಗಮನದ ವಿಷಯದಲ್ಲಿ ಮುಂತಿಳಿಸಿದವರನ್ನು ಕೊಂದರು. ನೀವು ಈಗ ಆತನನ್ನು ಹಿಡುಕೊಟ್ಟು ಕೊಂದವರಾದಿರಿ" (ಅಪೊಸ್ತಲರ ಕೃತ್ಯಗಳು 7:52).

**ವಚನ 32.** ಯೇಸು, **ನೀವು ಹಿರಿಯರ ಪಾಪದ ಅಳತೆಯನ್ನು ಪೂರ್ತಿಮಾಡಿರಿ** ಎಂದು ಹೇಳಿದನು. ಯೂದನಿಗೆ ಯೇಸು ನಂತರ ಏನು ಹೇಳಿದನೋ ಅದನ್ನು ಹೇಳುವ ಇನ್ನೊಂದು ವಿಧಾನ: "ನೀನು ಮಾಡುವದನ್ನು, ಬೇಗನೇ ಮಾಡಿಬಿಡು" (ಯೋಹಾನ 13:27). TEV ಅನುವಾದದಲ್ಲಿ, "ಹಾಗಿದದಲ್ಲಿ ಹೋಗು, ನಿನ್ನ ಹಿರಿಯರು ಏನು ಮಾಡಬೇಕೆಂದಿದ್ದರೋ ಅದನ್ನು ಮಾಡಿ ಮುಗಿಸು!" ಎಂಬ ಅರ್ಥಕೊಡುತ್ತದೆ. Alexander Balmain Bruce ರವರು ಈ ವಿಚಾರವನ್ನು ಇನ್ನು ಹೆಚ್ಚಾಗಿ ವಿವರಿಸಿದ್ದಾರೆ: "ನಿಮ್ಮ ಹಿರಿಯರ ಅಳತೆಯನ್ನು ತುಂಬಿಸಿರಿ; ದೇವರು ನಿಮ್ಮ ಬಳಿಗೆ ಕಳುಹಿಸಿದ ಪ್ರವಾದಿಗಳನ್ನು ಕೊಲ್ಲುವದರ ಮೂಲಕ ಅವರ ದುಷ್ಕೃತ್ಯಗಳಿಗೆ ಕಿರೀಟವನ್ನಿಡಿರಿ. ಕೊನೆಗೆ ನಿಮ್ಮ ಹೃದಯದಲ್ಲಿ ಬಹಳ ದಿನಗಳಿಂದ ಇರುವದನ್ನು ಮಾಡಿರಿ. ಸಮಯವು ಈಗ ಬಂದಿದೆ."[33] ಯೇಸು ಉದ್ದೇಶ ಪೂರ್ವಕವಾಗಿ, "ನೀವು ಎಲ್ಲಾ ಎಚ್ಚರಿಕೆಗಳ ವಿರುದ್ಧವಾಗಿ ನಿಮ್ಮ ಹೃದಯಗಳನ್ನು ಕಠಿಣಪಡಿಸಿಕೊಂಡಿರುವದರಿಂದ ಈಗ ಜವಾಬ್ದಾರಿ ಸಂಪೂರ್ಣವಾಗಿ ನಿಮ್ಮದಾಗಿದೆ" ಎಂದು ಅರ್ಥೈಸುತ್ತಾನೆ.[34] ಹಲವು ಸಂದರ್ಭಗಳಲ್ಲಿ ಯೆಹೂದ್ಯರು ಯೇಸುವಿಗೆ ಮರಣ ದಂಡನೆಯನ್ನು ನೀಡಬೇಕೆಂದು ಈಗಾಗಲೇ ಯೋಜಿಸಿಕೊಂಡಿದ್ದರು (12:14; 21:46; ಮಾರ್ಕ 11:18; ಲೂಕ 19:47; ಯೋಹಾನ 5:18; 7:1, 19, 25; 8:37, 40; 11:53).

**ವಚನ 33.** ಸ್ನಾನಿಕನಾದ ಯೋಹಾನನು ಯೋರ್ದಾನ ಹೊಳೆಯ ಬಳಿಯಲ್ಲಿ ತನ್ನಿಂದ ದೀಕ್ಷಾಸ್ನಾನವನ್ನು ತೆಗೆದುಕೊಳ್ಳಲು ಬಂದ ಫರಿಸಾಯರನ್ನು ಮತ್ತು ಸದ್ದುಕಾಯರನ್ನು ಕೇಳಿದನು. "ಎಲೈ ಸರ್ಪಜಾತಿಯವರೇ, ಮುಂದೆ ಕಾಣಬರುವ ದೈವಕೋಪದಿಂದ ತಪ್ಪಿಸಿಕೊಳ್ಳುವದಕ್ಕೆ ನಿಮಗೆ ಉಪದೇಶ ಮಾಡಿದವರಾರು?" (3:7). ಯೇಸು ಸಹ ಇದೇ ಅಲಂಕಾರವನ್ನು ಫರಿಸಾಯರನ್ನು **ಸರ್ಪಜಾತಿಯವರೇ** ಎಂದು ಕರೆಯುವದರ ಮೂಲಕ ಉಪಯೋಗಿಸುತ್ತಾನೆ (ನೋಡಿರಿ 12:34ರ ವ್ಯಾಖ್ಯಾನ). ಅವರ ಎಚ್ಚರಿಕೆಯ ಮಾತುಗಳು ತಿರಸ್ಕರಿಸಲ್ಪಟ್ಟವು; ಮತ್ತು ಈಗ ಯೇಸು ಅವರಿಗೆ **ನರಕದಂಡನೆಗೆ ಹೇಗೆ ತಪ್ಪಿಸಿಕೊಂಡೀರಿ?** ಎಂದು ಕೇಳಿದನು. ಆತನ ವಾಕ್ಚಾತುರ್ಯದ ಪ್ರಶ್ನೆ ಒಂದು ವೇಳೆ ಅವರು ತಮ್ಮ ಕೆಟ್ಟ ಯೋಜನೆಗಳನ್ನು ಅನುಸರಿಸಿದರೆ ಅವರು ನ್ಯಾಯತೀರ್ಪಿನಿಂದ ಅಥವಾ ನರಕದ "ತೀರ್ಪಿನಿಂದ" ತಪ್ಪಿಸಿಕೊಳ್ಳಲು ಆಗುವದಿಲ್ಲ ಎಂಬ ಅರ್ಥದಲ್ಲಿ ಕೇಳುತ್ತಾನೆ.

## ಹೆಚ್ಚುವರಿಯಾದ ಆಲೋಚನೆಗಳು ಏಳನೆಯ ವಿಪತ್ತಿಗೆ ಸಂಬಂಧಿಸಿದಂತೆ (23:34-36)

**[34]ಆದದರಿಂದ ನೋಡಿರಿ, ನಾನು ನಿಮ್ಮ ಬಳಿಗೆ ಪ್ರವಾದಿಗಳನ್ನೂ ಜ್ಞಾನಿಗಳನ್ನೂ ಶಾಸ್ತ್ರಿಗಳನ್ನೂ ಕಳುಹಿಸುತ್ತೇನೆ; ಅವರಲ್ಲಿ ಕೆಲವರನ್ನು ಕೊಲ್ಲುವಿರಿ. ಶಿಲುಬೆಗೆ ಹಾಕುವಿರಿ; ಕೆಲವರನ್ನು ನಿಮ್ಮ ಸಭಾಮಂದಿರಗಳಲ್ಲಿ ಕೊರಡೆಗಳಿಂದ ಹೊಡೆದು ಊರಿಂದ ಊರಿಗೆ ಅಟ್ಟಿಕೊಂಡುಹೋಗುವಿರಿ. [35]ಹೀಗೆ ನೀತಿವಂತನಾದ ಹೇಬೆಲನ ರಕ್ತವು ಮೊದಲುಗೊಂಡು ನೀವು ದೇವಾಲಯಕ್ಕೂ ಯಜ್ಞವೇದಿಗೂ ನಡುವೆ ಕೊಂದು ಹಾಕಿದ ಬರಕೀಯನ ಮಗನಾದ ಜಕರೀಯನ ರಕ್ತದವರೆಗೂ ಭೂಮಿಯ ಮೇಲೆ ಸುರಿಸಲ್ಪಟ್ಟ ಎಲ್ಲಾ ನೀತಿವಂತರ ರಕ್ತದಿಂದುಂಟಾಗುವ ಅಪರಾಧವು ನಿಮ್ಮ ತಲೆಯ ಮೇಲೆ ಬರುವದು. [36]ಅದೆಲ್ಲಾ ಈ ಸಂತತಿಯವರ ಮೇಲೆ ಬರುವದೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ.**

**ವಚನ 34.** ಅವರ ಪೂರ್ವಜರು ಪ್ರವಾದಿಗಳನ್ನು ಕೊಂದಂತೆಯೇ, ಶಾಸ್ತ್ರಿಗಳು, ಮತ್ತು ಫರಿಸಾಯರು, ಯೇಸುವಿನ ಶಿಷ್ಯರನ್ನು ಕೊಂದರು. ಆತನು ಅವರ ಬಳಿಗೆ **ಪ್ರವಾದಿಗಳನ್ನೂ ಜ್ಞಾನಿಗಳನ್ನೂ ಶಾಸ್ತ್ರಿಗಳನ್ನೂ** ಪ್ರೇರೇಪಣೆಯನ್ನು ಹೊಂದಿದ ಮನುಷ್ಯರನ್ನು ಮತ್ತು ಸುವಾರ್ತೆಯನ್ನು ಸಾರುವದಕ್ಕಾಗಿ ಇತರ ಬೋಧಕರನ್ನು ಕಳುಹಿಸುತ್ತೇನೆ ಎಂದು ಕರ್ತನು ಹೇಳುತ್ತಾನೆ. ಅದಾಗ್ಯೂ, ಅವರನ್ನು ಸಹ ಯೆಹೂದಿ ನಾಯಕರು ತಿರಸ್ಕರಿಸುವರು: **ಅವರಲ್ಲಿ ಕೆಲವರನ್ನು ಕೊಲ್ಲುವಿರಿ. ಶಿಲುಬೆಗೆ ಹಾಕುವಿರಿ; ಕೆಲವರನ್ನು ನಿಮ್ಮ ಸಭಾಮಂದಿರಗಳಲ್ಲಿ ಕೊರಡೆಗಳಿಂದ ಹೊಡೆದು ಊರಿಂದ ಊರಿಗೆ ಅಟ್ಟಿಕೊಂಡುಹೋಗುವಿರಿ ಎಂದು ಹೇಳಿದನು.** "ಶಿಲುಬೆಗೆ ಹಾಕುವದು" ಎಂದರೆ ಯೆಹೂದ್ಯರು "ಅವರನ್ನು ಶಿಲುಬೆಗೆ ಹಾಕುವದಕ್ಕೆ ಕಾರಣರಾಗುವರು" ಎಂದು ಯೇಸು ಅರ್ಥವನ್ನು ನೀಡುತ್ತಾನೆ. ಅವರು ಆತನ ಶಿಷ್ಯರನ್ನು ರೋಮನ್ನರಿಗೆ ಹಿಡಿದುಕೊಡುವರು, ಅವರು ಅವರನ್ನು ಶಿಲುಬೆಗೆ ಹಾಕುವರು (ನೋಡಿರಿ ಅಪೊಸ್ತಲರ ಕೃತ್ಯಗಳು 2:36; 4:10). ಇಲ್ಲಿ ಈ ಊಹೆ ಯೇಸು ತನ್ನ ಶಿಷ್ಯರಿಗೆ ನೀಡಿದ ಹಿಂದಿನ ಎಚ್ಚರಿಕೆಗೆ ಸಂಬಂಧಿಸಿದ್ದಾಗಿದೆ (ನೋಡಿರಿ 5:11, 12; 10:17, 23ರ ಮೇಲಿನ ವ್ಯಾಖ್ಯಾನ).

ತನ್ನ ವಾಗ್ದಾನವನ್ನು ನೆರವೇರಿಸುವದಕ್ಕಾಗಿ, ಯೇಸು ಅಪೊಸ್ತಲರನ್ನು, ಪ್ರವಾದಿಗಳನ್ನು, ಮತ್ತು ಇತರೆ ಬೋಧಕರನ್ನು ಯೆಹೂದ್ಯರ ಮಧ್ಯದಲ್ಲಿ ಕಳುಹಿಸಿದನು. ಆತನು ಪ್ರವಾದಿಸಿದಂತೆಯೇ, ಅವರು ಈ ಸಂತತಿಯವರಿಂದಲೇ ತೀವ್ರವಾದ ಹಿಂಸೆಗೆ ಒಳಗಾದರು (23:36). ಅಪೊಸ್ತಲರು ಯೆಹೂದಿ ನಾಯಕರಿಂದ ಸೆರೆಮನೆಗೆ ಹಾಕಲ್ಪಟ್ಟರು ಆದರೆ ಅವರು ದೇವರ ದೂತನ ಮೂಲಕ ಅದ್ಭುತವಾಗಿ ಬಿಡುಗಡೆಯಾದರು (ಅಪೊಸ್ತಲರ ಕೃತ್ಯಗಳು 5:17-21). ಅವರು ಪುನಃ ಬಂದಿಸಲ್ಪಟ್ಟಾಗ ಮತ್ತು ಸನ್ಹೇದ್ರೀನ್ ಮಹಾ ಸಭೆಯ ಮುಂದೆ ನಿಲ್ಲಿಸಿದಾಗ, ಅವರಿಗೆ "ಏಟುಗಳನ್ನು" ಕೊಟ್ಟು "ಯೇಸುವಿನ ಕುರಿತಾಗಿ ಮಾತನಾಡಬಾರದೆಂದು" ಎಚ್ಚರಿಕೆ ನೀಡಿದರು (ಅಪೊಸ್ತಲರ ಕೃತ್ಯಗಳು 5:27, 28, 40). ಸ್ತೇಫನನು ಮೊದಲನೇ ಕ್ರೈಸ್ತ ರಕ್ತಸಾಕ್ಷಿಯಾದನು, ಸನ್ಹೆದ್ರಿನ್ ಸಭೆಯ ಆಜ್ಞೆಯ ಮೇರೆಗೆ ಕಲ್ಲೆಸೆದು ಕೊಲ್ಲಲ್ಪಟ್ಟನು (ಅಪೊಸ್ತಲರ ಕೃತ್ಯಗಳು 6:12; 7:1, 57, 58).[35] ಆ ಸಮಯದಲ್ಲಿ, ಸಭೆಯ ವಿರುದ್ಧವಾಗಿ ದೊಡ್ಡ ಹಿಂಸೆ ಪ್ರಾರಂಭವಾಯಿತು (ಅಪೊಸ್ತಲರ ಕೃತ್ಯಗಳು 8:1). ಯಾವಾಗ ಅವರಿಗೆ ಮರಣದಂಡನೆ ವಿಧಿಸಲ್ಪಡುತ್ತದೋ, "[ಆತನು] ಅವರ ವಿರೋಧವಾಗಿ ಮತ ನೀಡುತ್ತಿದ್ದನು" (ಅಪೊಸ್ತಲರ ಕೃತ್ಯಗಳು 26:10). ಆತನ ಧರ್ಮ ಭ್ರಾಂತಿಯು ಆತನನ್ನು ದೂರದ ಪಟ್ಟಣಗಳಿಗೆ ಕ್ರೈಸ್ತರನ್ನು ಬಂಧಿಸುವದಕ್ಕಾಗಿ ಕರೆದೊಯ್ಯಿತು (ಅಪೊಸ್ತಲರ ಕೃತ್ಯಗಳು 9:1, 2; 26:11).

ಯೋಹಾನನ ಸಹೋದರನಾದ ಯಾಕೋಬ ಅಗ್ರಿಪ್ಪ ಹೆರೋದನ I ಈತನ ತಲೆ ಹೊಯಿಸಿದನು, ಅಪೊಸ್ತಲರಲ್ಲಿ ಮೊದಲನೆಯ ಹುತಾತ್ಮನಾದನು (ಅಪೊಸ್ತಲರ ಕೃತ್ಯಗಳು

12:1, 2). ಈ ಹೆರೋದನು ಪೇತ್ರನನ್ನು ಸಹ ಅವನಿಗೂ ಸಹ ಇದೇ ಶಿಕ್ಷೆಯನ್ನು ನೀಡುವ ಉದ್ದೇಶದಿಂದ ಸೆರೆಗೆ ಹಾಕಿಸಿದನು; ಆದರೆ ದೇವರು ಮಧ್ಯ ಪ್ರವೇಶಿಸಿದನು ಮತ್ತು ಪೇತ್ರನು ಬಿಡುಗಡೆ ಹೊಂದಿದನು (ಅಪೊಸ್ತಲರ ಕೃತ್ಯಗಳು 12:3-12). ಪೌಲನು ಮತ್ತು ಆತನ ಸಂಗಾತಿಗಳು ಎಲ್ಲಿಯೇ ಸುವಾರ್ತಾ ಪ್ರಯಾಣಕ್ಕೆ ಹೋದರು ಯೆಹೂದಿ ನಾಯಕರಿಂದ ಬಾಧೆಗೆ ಮತ್ತು ಹಿಂಸೆಗೆ ಒಳಗಾದರು. ಅನೇಕಾವರ್ತಿ ಅವರು ತಮ್ಮ ಸ್ವಂತ ಪ್ರಾಣವನ್ನು ಉಳಿಸಿಕೊಳ್ಳುವದಕ್ಕಾಗಿ ಮುಂದಿನ ಪಟ್ಟಣಕ್ಕೆ ಓಡಿಹೋಗಬೇಕಾಗುತ್ತಿತ್ತು.[36]

**ವಚನ 35.** ಆತನ ಶಿಷ್ಯರ ಹಿಂಸೆಯ ಪರಿಣಾಮವಾಗಿ, **ಭೂಮಿಯ ಮೇಲೆ ಸುರಿಸಲ್ಪಟ್ಟ ಎಲ್ಲಾ ನೀತಿವಂತರ ರಕ್ತದಿಂದುಟಾಗುವ ಅಪರಾಧವು ಶಾಸ್ತ್ರಿಗಳ ಮತ್ತು ಫರಿಸಾಯರ ತಲೆಯ ಮೇಲೆ ಬರುವದು.** ದೇವರ ಅಮಾಯಕ ಸೇವಕರನ್ನು ಕೊಂದ ಅಪರಾಧವು ಅನೇಕ ವರ್ಷಗಳವರೆಗೆ ಕೂಡಿಸಿಡಲಾಗಿತ್ತು, ಮತ್ತು ಅದು ದೇವರ ನ್ಯಾಯತೀರ್ಪಿನಂದು ಬೇಗನೇ ಉತ್ತುಂಗಕ್ಕೆ ಏರಿ ಇಸ್ರಾಯೇಲರ ಮೇಲೆ ಬರುವದು.

"ಭೂಮಿಯ ಮೇಲೆ ಸುರಿಸಲ್ಪಟ್ಟ ಎಲ್ಲಾ ನೀತಿವಂತರ ರಕ್ತ" ಮುಂದೆ ಇಬ್ಬರು ಮನುಷ್ಯರ ಮರಣದ ಮೂಲಕ ನಿರ್ಧರಿಸಲ್ಪಟ್ಟಿತು. **ಹೇಬೆಲನು** ಮೊದಲನೆಯ **ನೀತಿವಂತನಾದ** ಮನುಷ್ಯನು, ತನ್ನ ಸಹೋದರನಾದ ಕಾಯಿನನಿಂದ ಕೊಲ್ಲಲ್ಪಟ್ಟನು (ಆದಿಕಾಂಡ 4:8). ಯೋಹಾನನು ಕಾಯಿನನು ತನ್ನ ಸಹೋದರನನ್ನು ಕೊಂದನು ಯಾಕೆಂದರೆ, "ಆತನ ಕೃತ್ಯಗಳು ಕೆಟ್ಟವುಗಳಾಗಿದ್ದವು ಮತ್ತು ಆತನ ತಮ್ಮನ ಕೃತ್ಯಗಳು ಒಳ್ಳೆಯವುಗಳಾಗಿದ್ದವು" ಎಂದು ಬರೆಯುತ್ತಾನೆ (1 ಯೋಹಾನ 3:12). ಇಬ್ರಿಯ ಗ್ರಂಥಕರ್ತನು ಹೇಳುತ್ತಾನೆ, "ಹೇಬೆಲನು ನಂಬಿಕೆಯಿಂದ ದೇವರಿಗೆ ಕಾಯಿನನಿಗಿಂತ ಉತ್ತಮವಾದ ಯಜ್ಞವನ್ನು ಅರ್ಪಿಸಿದನು, ಅವುಗಳ ಮೂಲಕ ಆತನು ತಾನು ನೀತಿವಂತನೆಂದು ಸಾಕ್ಷಿಹೊಂದಿದನು; ದೇವರು ಅವನ ಕಾಣಿಕೆಗಳನ್ನು ಅಂಗೀಕಾರಮಾಡಿದ್ದೇ ಆ ಸಾಕ್ಷಿ. ಅವನು ಸತ್ತಿದ್ದರೂ ಅವನ ನಂಬಿಕೆಯ ಮೂಲಕ ಇನ್ನೂ ಮಾತಾಡುತ್ತಿದ್ದಾನೆ" (ಇಬ್ರಿಯ 11:4). ಆತನ ಮುಗ್ಧತೆಯಿಂದಾಗಿ, ಹೆಬೇಲನ **ರಕ್ತವು** ಭೂಮಿಯಿಂದ ನ್ಯಾಯಕ್ಕಾಗಿ ಕೂಗುತ್ತದೆ (ಆದಿಕಾಂಡ 4:10; ಇಬ್ರಿಯ 12:24).

ಉಲ್ಲೇಖಿಸಲ್ಪಟ್ಟ ಎರಡನೆಯ ವ್ಯಕ್ತಿ ಜೆಕರ್ಯನು ಎಂದು ಗುರುತಿಸುವದು ಕಷ್ಟ. **ಆತನನ್ನು ಬರಕೀಯನ ಮಗನು ಎಂದು ಉಲ್ಲೇಖಿಸಲಾಗಿದೆ ಅವನನ್ನು ದೇವಾಲಯಕ್ಕೂ ಯಜ್ಞವೇದಿಗೂ ನಡುವೆ ಕೊಂದು ಹಾಕಿದನು.** Gary M. Burge ರವರ ಪ್ರಕಾರ, ಸತ್ಯವೇದ ದಲ್ಲಿ ಜೆಕರ್ಯ ಎಂದು ಹೆಸರಿರುವ ಸುಮಾರು ಮೂವತ್ತಕ್ಕೂ ಹೆಚ್ಚು ಜನರಿದ್ದಾರೆ ಎಂದು ಹೇಳುತ್ತಾರೆ.[37] ಅವರಲ್ಲಿ ಒಬ್ಬನು ಮಾತ್ರ ದೇವಾಲಯದ ಕ್ಷೇತ್ರದಲ್ಲಿ ಕೊಲ್ಲಲ್ಪಟ್ಟನು ಅವನನ್ನು ಅರಸನಾದ ಯೆಹೋವಾಶನ ಅಪ್ಪಣೆಯ ಮೇರೆಗೆ ಕಲ್ಲೆಸೆದು ಕೊಂದರು, ಅವನು ವಿಗ್ರಹಾರಾಧನೆಯನ್ನು ಬಲವಾಗಿ ವಿರೋಧಿಸುತ್ತಿದ್ದನು. ಆತನ ಮರಣವು "ಕರ್ತನ ಆಲಯದ ಎದುರಿನಲ್ಲಿ ಸಂಭವಿಸಿತು" (2 ಪೂರ್ವಕಾಲವೃತ್ತಾಂತ 24:20, 21). ಅದೇ ಸಮಯದಲ್ಲಿ ಈ ವಿವರಗಳು ಯೆಸುವಿನ ವರ್ಣನೆಗೆ ಸರಿಹೊಂದುತ್ತವೆ, "ಜೆಕರ್ಯನು ಯಾಜಕನಾಗಿರುವ ಯೆಹೋಯಾದನ ಮಗನು" "ಬಕರೀಯನ ಮಗನಲ್ಲ."

ವಿಮರ್ಶೆಗಾರರಿಂದ ಈ ಕಷ್ಟವನ್ನು ಪರಿಹರಿಸಲಾಗಿದೆ. (1) ಯೇಸು ಮೊದಲನೆಯ ಶತಮಾನದಲ್ಲಿ ಯೆಹೂದ್ಯರು ಕೊಲೆ ಮಾಡಿದ ಜೆಕರ್ಯನ ಕುರಿತಾಗಿ ಯೇಸು ಮಾತನಾಡುತ್ತಿದ್ದಾನೆಂದು ಕೆಲವರು ಯೋಚಿಸುತ್ತಾರೆ. ಅವರು **ನೀವು** ಎಂಬ ದ್ವಿತಿಯ ಪುರುಷ ಸರ್ವನಾಮಪದವನ್ನು ಉಪಯೋಗಿಸುತ್ತಾರೆ: ವೈಯಕ್ತಿಕ ಹೆಸರಿನ ಒತ್ತಿ ಕರೆದಿರುವದು. "ದೇವಾಲಯಕ್ಕೂ ಯಜ್ಞವೇದಿಗೂ ನಡುವೆ *ನೀವು* ಕೊಂದು ಹಾಕಿದೆ" (ಒತ್ತಿ ಹೇಳಿದ್ದು ಸೇರಿದೆ). ಈ ವಿಷಯದಲ್ಲಿ, ಸಮಯದ ಅವಧಿಯನ್ನು ಸೃಷ್ಟಿಯಿಂದ ಮೊದಲನೆ ಶತಮಾನದವರೆಗೆ ಎಂದು ಪರಿಗಣಿನೆಗೆ ತೆಗೆದುಕೊಳ್ಳಲಾಗಿದೆ - ಯೇಸುವಿನ ಶೋತ್ರುಗಳಿಗೆ,

ಎಲ್ಲಾ ಸಮಯದಲ್ಲಿ. ಯೋಸೆಫಸ್‌ನು ದೇವಾಲಯದ ಬಳಿಯಲ್ಲಿ ಹತನಾದನು "ಬರಕೀಯನ ಮಗನಾದ ಜೆಕರ್ಯನು" ಎಂದು ವರದಿ ಮಾಡುತ್ತಾನೆ, ಈ ಕೃತ್ಯವನ್ನು ಮತಾಂಧರು ಯೆರೂಸಲೇಮಿನ ನಾಶನದ ಸಮಯದಲ್ಲಿ ಮಾಡಿದರು.[38] ಯೇಸು ಈ ವಚನದಲ್ಲಿ ಈ ಮಾತುಗಳನ್ನು ಹೇಳಿದ *ತರುವಾಯ* ಸುಮಾರು ನಲವತ್ತು ವರ್ಷಗಳ *ನಂತರ* ಈ ಕೊಲೆಯು ಸಂಭವಿಸಿತು.

(2) ಇತರರು ಜೆಕರ್ಯ ಸಣ್ಣ ಪ್ರವಾದಿ ತನ್ನ ಹೆಸರಿನ ಮೇಲೆ ಹಳೆ ಒಡಂಬಡಿಕೆಯಲ್ಲಿ ಒಂದು ಗ್ರಂಥವನ್ನು ಬರೆದಿರುವ ಈತನ ಕುರಿತಾಗಿ ಯೇಸು ಮಾತನಾಡುತ್ತಾನೆಂದು ನಂಬುತ್ತಾರೆ. ಜೆಕರ್ಯ 1:1ರಲ್ಲಿ ತನ್ನನ್ನು ತಾನು, "ಪ್ರವಾದಿಯಾದ ಜೆಕರ್ಯನು, ಬರಕೀಯನ ಮಗನು" ಎಂದು ಉಲ್ಲೇಖಿಸಿದ್ದಾನೆ. ಈ ಹೆಸರು ಯೇಸು ಹೇಳಿದ ಹೆಸರಿಗೆ ಹೊಂದಿಕೆಯಾಗುತ್ತದೆ. ಒಂದು ವೇಳೆ ಈ ಗುರುತಿಸುವಿಕೆ ಸರಿಯಾಗಿದ್ದಲ್ಲಿ, ಜೆಕರ್ಯನು ಪ್ರವಾದಿಗಳಲ್ಲಿ ಕೊನೆಯವನಾಗಿರುವದರಿಂದ ಸಮಯದ ಅವಧಿ ಸೃಷ್ಟಿಯಿಂದ ಹಳೆ ಒಡಂಬಡಿಕೆಯ ಅಂತ್ಯದ ವರೆಗೆ ಇರುತ್ತದೆ, ಆತನ ಕೃತ್ಯಗಳು ಅವರು ಗಡಿಪಾರಾದ ನಂತರ ಮತ್ತು ಕ್ರಿ.ಶ. 5ನೇ ಶತಮಾನದವರೆಗೆ ವಿಸ್ತರಿಸುವದರೊಂದಿಗೆ ಸಂಭವಿಸಿದವು. ಮುಖ್ಯವಾದ ಸಮಸ್ಯೆ ಎಂದರೆ ವೇದವಾಕ್ಯವು ಆತನು ಹೇಗೆ ಸತ್ತನು ಎಂಬುದನ್ನು ಪ್ರಕಟಿಸುವದಿಲ್ಲ. ದೇವಾಲಯವನ್ನು ಪುನಃ ಕಟ್ಟಲು ಪ್ರೋತ್ಸಾಹಿಸಿದ ಪ್ರವಾದಿ ಈತನಾಗಿದ್ದರಿಂದ ನಿಜವಾಗಿ ಅಲ್ಲಿ ಹತನಾದನೋ?

(3) ಇತರ ಪಂಡಿತರು ವಚನ 35ರಲ್ಲಿ ಉಲ್ಲೇಖಿಸಿರುವ ಜೆಕರ್ಯನು ಯೆಹೋಯಾದನ ಮಗನು. ಕ್ಲಿಷ್ಟಕರವಾದ "ಬರಕೀಯನ ಮಗನು" ಎಂಬ ಪದನಾಮವನ್ನು ವಿವರಿಸಲು ಅಸಂಖ್ಯಾತ ಸಲಹೆಗಳು ಕೊಡಲ್ಪಟ್ಟಿವೆ. ಸತ್ಯವೇದದಲ್ಲಿ ಜನರು ಕೆಲವೊಮ್ಮೆ ಒಂದಕ್ಕಿಂತ ಹೆಚ್ಚು ಹೆಸರುಹಳನ್ನು ಉಳ್ಳವರಾಗಿದ್ದಾರೆ, ಬರಕೀಯನು ಎಂಬುದು ಯೆಹೋಯಾದನಿಗಿರುವ ಇನ್ನೊಂದು ಹೆಸರಾಗಿರಬಹುದು. ಇನ್ನೊಂದು ಸಾಧ್ಯತೆ ಎಂದರೆ ಬಕರೀಯನು ಜೆಕರ್ಯನ ಮತ್ತು ಯೆಹೋಯಾದನ ಪೂರ್ವಜನರಾಗಿರಬಹುದು. ಈ ವಿಷಯದಲ್ಲಿ "ಮಗನು" ಎಂಬ ಪದವನ್ನು "ವಂಶಸ್ಥ"[39] ಎಂಬ ಪದಕ್ಕೆ ಉಪಯೋಗಿಸಿರಬಹುದು. ಬಹುಶಃ "ಬಕರೀಯನ ಮಹನು" ಎಂಬ ಪದಗಳು ಇಬ್ಬರು ಜೆಕರ್ಯರಲ್ಲಿ ಗಲಿಬಿಲಿಗೆ ಒಳಗಾಗಿದ್ದ ಶಾಸ್ತ್ರಿಗಳಿಂದ ನಂತರದಲ್ಲಿ ಸೇರಿಸಲ್ಪಟ್ಟಿರಬಹುದು. ಅದೇ ಸಮಯದಲ್ಲಿ ಈ ಸಲಹೆಗೆ ಇರುವ ಪಠ್ಯಗಳ ಸಾಕ್ಷಿಯು ಮಿತಿಯಲ್ಲಿರುತ್ತದೆ. ಲೂಕನ ಸುವಾರ್ತೆಯಲ್ಲಿ ಇದಕ್ಕೆ ಸಮಾನವಾದ ಭಾಗವು "ಬಕರೀಯನ ಮಗನು" ಎಂಬ ವಾಕ್ಯಭಾಗವನ್ನು ಉಪಯೋಗಿಸುವದಿಲ್ಲ ಎಂಬುದು ವಿಶಿಷ್ಟವಾಗಿದೆ (ಲೂಕ 11:51).

ಒಂದು ವೇಳೆ ಜೆಕರ್ಯನು ಯೆಹೋಯಾದನ ಮಗನು ಎಂಬುದು ಸರಿಯಾಗಿದ್ದಲ್ಲಿ, ಯೇಸು ಭೂಮಿಯ ಮೇಲೆ ಹಳೆ ಒಡಂಬಡಿಕೆಯ ಉದ್ದಕ್ಕೂ ಸುರಿಸಲ್ಪಟ್ಟ ಎಲ್ಲಾ ನೀತಿವಂತರ ರಕ್ತದಿಂದುಂಟಾಗುವ ಅಪರಾಧವು ಶಾಸ್ತ್ರಿಗಳ ಮತ್ತು ಫರಿಸಾಯರ ತಲೆಯ ಮೇಲೆ ಬರುವದು ಎಂದು ಹೇಳುತ್ತಿದ್ದಾನೆ. ಇಬ್ರಿಯಾ ಸತ್ಯವೇದದಲ್ಲಿ, ಮೊದಲನೆಯ ಪುಸ್ತಕ ಆದಿಕಾಂಡ (Abelನ ಹತ್ಯೆ ಕಂಡುಬರುತ್ತದೆ) ಮತ್ತು ಕೊನೆಯ ಪುಸ್ತಕ 2ನೇ ಪೂರ್ವಕಾಲವೃತ್ತಾಂತ (ಅಲ್ಲಿ ಜೆಕರ್ಯನ ಹತ್ಯವನ್ನು ದಾಖಲಿಸುತ್ತದೆ). ವರ್ಣನೆಯು "ಆದಿಕಾಂಡದಿಂದ ಪ್ರಕಟಣೆಯವರೆಗೆ" ಎಂಬ ಕ್ರೈಸ್ತ ಹೇಳಿಕೆಗೆ ಸಮನಾಗಿರಬಹುದು.

ಎರಡು ಸಂಗತಿಗಳಲ್ಲಿ ಈ ಹತ್ಯೆಯಲ್ಲಿ ಸೇಡಿನ ಭಾವನೆ ಕಂಡುಬರುತ್ತದೆ. ಮೊದಲೆ ಗಮನಿಸಿದಂತೆ, "ಹೆಬೇಲನ ರಕ್ತವು ಭೂಮಿಯಿಂದ ನ್ಯಾಯಕ್ಕಾಗಿ ಕೂಗಿತು" (ಆದಿಕಾಂಡ 4:10). ಜೆಕರ್ಯನನ್ನು ಕಲ್ಲೆಸೆದು ಕೊಲ್ಲುವಾಗ ಅವನು "ಯೆಹೋವನೇ ನೋಡಿ ವಿಚಾರಿಸಲಿ!" ಎಂದು ಕೂಗಿಕೊಂಡನು (2 ಪೂರ್ವಕಾಲವೃತ್ತಾಂತ 24:22). R. T. France ರವರು ಹೀಗೆ ಹೇಳುತ್ತಾರೆ, "ಈ ಎರಡೂ ಉದಾಹರಣೆಗಳ ಆಯ್ಕೆ ಯೇಸುವಿನ

ಮುಖ್ಯವಿಷಯ ರಕ್ತದಿಂದುಂಟಾಗುವ ಅಪರಾದಕ್ಕೆ ಎರಡರಷ್ಟು ಸಮಂಜಸವಾಗಿದೆ."[40]

**ವಚನ 36.** ಯೇಸು ಈ ಅನ್ಯಾಯದ ದಂಡನೆ **ಈ ಸಂತತಿಯವರ ಮೇಲೆ ಬರುವದೆಂದು** ಪ್ರವಾದಿಸಿದ್ದನು (ನೋಡಿರಿ 11:16; 12:39, 40; 17:17). ನಲವತ್ತು ವರ್ಷದಲ್ಲಿ Vespasian ಮತ್ತು ಆತನ ಮಗ Titus ಸೈನ್ಯವು ಯೆರೂಸಲೇಮನ್ನು ಮುತ್ತಿ, ಕೊನೆಗೆ ಕ್ರಿ.ಶ. 70ರಲ್ಲಿ ನಾಶಮಾಡಿತು.

## ಯೆರೂಸಲೇಮಿನ ಕುರಿತು ಆತನ ದುಃಖ (23:37-39)

**[37]ಯೆರೂಸಲೇಮೇ, ಯೆರೂಸಲೇಮೇ, ಪ್ರವಾದಿಗಳ ಪ್ರಾಣ ತೆಗೆಯುವವಳೇ, ದೇವರು ನಿನ್ನ ಬಳಿಗೆ ಕಳುಹಿಸಿಕೊಟ್ಟವರನ್ನು ಕಲ್ಲೆಸೆದು ಕೊಲ್ಲುವವಳೇ, ಕೋಳಿ ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಕೂಡಿಸಿ ಕೊಳ್ಳುವಂತೆ ನಿನ್ನ ಮಕ್ಕಳನ್ನು ಕೂಡಿಸಿಕೊಳ್ಳುವದಕ್ಕೆ ನನಗೆ ಎಷ್ಟೋ ಸಾರಿ ಮನಸ್ಸಿತ್ತು; ಆದರೆ ನಿಮಗೆ ಮನಸ್ಸಿಲ್ಲದೆ ಹೋಯಿತು. [38]ನೋಡಿರಿ, ನಿಮ್ಮ ಆಲಯವು ನಿಮಗೆ ಬರೀದಾಗಿ ಬಿಟ್ಟದೆ. [39]ಈಗಿನಿಂದ - ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ ಎಂದು ನೀವು ಹೇಳುವ ತನಕ ನೀವು ನನ್ನನ್ನು ನೋಡುವದೇ ಇಲ್ಲವೆಂದು ನಿಮಗೆ ಹೇಳುತ್ತೇನೆ ಅಂದನು.**

**ವಚನ 37. ಯೆರೂಸಲೇಮೇ, ಯೆರೂಸಲೇಮೇ ...** ಎಂದು ಉದ್ಧರಿಸುತ್ತಾ ಯೇಸು ತನ್ನ ಪ್ರಲಾಪವನ್ನು ಪ್ರಾರಂಭಿಸಿದನು. ಪದಗಳ ಅಥವಾ ಹೆಸರುಗಳ ಪುನರಾವರ್ತನೆ ಆಳವಾದ ಭಾವನೆಗಳನ್ನು ವ್ಯಕ್ತಪಡಿಸುತ್ತವೆ (2 ಸಮುವೇಲ 18:33; 1 ಅರಸುಗಳು 13:2; ಲೂಕ 10:41; 22:31). ಇನ್ನಿತರ ಯಾವುದೇ ಯೆಹೂದ್ಯನಂತೆ, ಯೇಸುವಿಗೆ ಪವಿತ್ರ ಪಟ್ಟಣದ ಮೇಲೆ ಬಲವಾದ ಮಮತೆಯಿತ್ತು. ಇಲ್ಲಿ ಆತನು "ಯೆರೂಸಲೇಮ" ಎಂಬ ಹೆಸರನ್ನು ಇಡೀ ಇಸ್ರಾಯೇಲ ಜನಾಂಗವನ್ನು ಸೂಚಿಸಲು ಉಪಯೋಗಿಸಿದ್ದನ್ನು ಎಂದು ತೋರಿಬರುತ್ತದೆ.

ಕರ್ತನು ಮುಂದುವರಿಸಿದನು, **ಪ್ರವಾದಿಗಳ ಪ್ರಾಣ ತೆಗೆಯುವವಳೇ, ದೇವರು ನಿನ್ನ ಬಳಿಗೆ ಕಳುಹಿಸಿಕೊಟ್ಟವರನ್ನು ಕಲ್ಲೆಸೆದು ಕೊಲ್ಲುವವಳೇ.** ಎಲ್ಲಾ ಪ್ರವಾದಿಗಳೂ ಮತ್ತು ದೇವರ ಸಂದೇಶವಾಹಕರು ಯೆರೂಸಲೇಮಿನಲ್ಲಿ ಕೊಲಲ್ಪಟ್ಟಿರದಿದ್ದರು, ಈ ಅಪರಾಧದ ಹೆಚ್ಚಿನ ಆಜ್ಞೆಗಳು ಪ್ರಾಮುಖ್ಯವಾಗಿ ಇಲ್ಲಿಂದಲೇ ಉದ್ಭವಿಸಿದವು. ಅವು ಸನ್ಹೇಡ್ರೀನ್‌ನಿಂದ ಇಲ್ಲವೇ ಯೆಹೋಯಾದನ ಮಗನಾದ ಜೆಕರ್ಯನ ವಿಷಯದಲ್ಲಿ ನಡೆದಂತೆ ಸಿಂಹಾಸನದಿಂದ. ಗ್ರೀಕ್ ಪಠ್ಯದಲ್ಲಿ "ಕೊಲೆ" ಮತ್ತು "ಕಲ್ಲೆಸೆದು ಕೊಲ್ಲುವದು" ಎಂಬ ಪದಗಳನ್ನು ನಿರಂತರ ವರ್ತಮಾನ ಕಾಲದಲ್ಲಿ ಅನುವಾದಿಸಲಾಗಿದೆ, ಅದನ್ನು "ಕೊಲ್ಲುತ್ತಿರುವವರು" ಮತ್ತು "ಕಲ್ಲೆಸೆಯುತ್ತಿರುವವರು" ಎಂದು ಅನುವಾದಿಸಬಹುದು. ಇನ್ನೊಂದು ರೀತಿಯಲ್ಲಿ, ಅದು ನಿರಂತರವಾದ ಕಾರ್ಯವನ್ನು ಸೂಚಿಸುತ್ತದೆ. ಕಲ್ಲೆಸೆದು ಕೊಲ್ಲುವದು ಮಾಟಮಂತ್ರಗಾರರನ್ನು (ಯಾಜಕಕಾಂಡ 20:27) ಮತ್ತು ದೇವದೂಷಕರನ್ನು (ಯಾಜಕಕಾಂಡ 24:16), ಸುಳ್ಳು ಪ್ರವಾದಿಗಳನ್ನು (ಧರ್ಮೋಪದೇಶಕಾಂಡ 13:1-11) ಮತ್ತು ವಿಗ್ರಹಾರಾಧಕರನ್ನು (ಧರ್ಮೋಪದೇಶಕಾಂಡ 17:2-7). ದೇವರಿಂದ ಕಳುಹಿಸಲ್ಪಟ್ಟ ಪ್ರಾಮಾಣಿಕ ವ್ಯಕ್ತಿಗಳನ್ನು ಈ ರೀತಿಯಾಗಿ ನಡೆಸಿಕೊಳ್ಳುವದು ಹಾಸ್ಯಸ್ಪದ ಮತ್ತು ದುಃಖಕರವಾದ ಸಂಗತಿ.

**ಎಷ್ಟೋ ಸಾರಿ** ಎನ್ನುವ ಪದವು ಯೇಸು ಯೆರೂಸಲೇಮಿಗೆ ಹಲವು ಪ್ರಯಾಣಗಳನ್ನು ಮಾಡಿದ್ದನು ಎಂಬುದನ್ನು ಸೂಚಿಸುತ್ತದೆ. ಯೇಸು ತಾನು ಮಗುವಾಗಿದ್ದಾಗ ತನ್ನ ತಂದೆತಾಯಿಗಳೊಂದಿಗೆ (ಲೂಕ 2:22-38) ಮತ್ತು ಹನ್ನೆರಡು ವರ್ಷದವನಾದಾಗ (ಲೂಕ 2:41-51), ಯೆರೂಸಲೇಮಿಗೆ ಪ್ರಯಾಣ ಮಾಡಿರುವದನ್ನು ಹೊರತುಪಡಿಸಿ ಯಾವುದೇ ಅಂಶಸೂಚಿ ಸುವಾರ್ತೆಯ ಸುವಾರ್ತಿಕನು ಈ ಬೆಟ್ಟಿಯನ್ನು ದಾಖಲಿಸಿರುವ ಪೂರ್ವದಲ್ಲಿ ಯೇಸು ಯೆರೂಸಲೇಮಿಗೆ ಬಂದಿದ್ದನು ಎಂಬುದನ್ನು ಉಲ್ಲೇಖಿಸುವದಿಲ್ಲ. ಅದಾಗ್ಯೂ

ಯೋಹಾನ ಸುವಾರ್ತೆಯಿಂದ ಯೇಸು ತನ್ನ ಸುಮಾರು 3½ ವರ್ಷಗಳ ವೈಯಕ್ತಿಕ ಸೇವೆಯ ಅವಧಿಯಲ್ಲಿ ಯೆರೂಸಲೇಮಿಗೆ ಹಲವು ಸಾರಿ ಭೇಟಿನೀಡಿದ್ದನು ಎಂಬುದನ್ನು ನೋಡುತ್ತೇವೆ (ಯೋಹಾನ 2:13; 5:1; 7:14; 10:22, 23; 12:12). ಕೊರ್ನೆಲ್ಯನ ಮನೆಯಲ್ಲಿ ಪೇತ್ರನ ಪ್ರಸಂಗದಲ್ಲಿ ಆತನ ಹೇಳಿಕೆ ಇನ್ನಿತರ ಬೆಟ್ಟಿಗಳನ್ನು ಸೂಚಿಸುತ್ತದೆ (ಅಪೊಸ್ತಲರ ಕೃತ್ಯಗಳು 10:39). ಯೇಸು ಧರ್ಮಶಾಸ್ತ್ರವನ್ನು ಪರಿಪೂರ್ಣವಾಗಿ ವಿಧೇಯನಾದದ್ದರಿಂದ, ಆತನು ಪ್ರತಿವರ್ಷ ಯೆರೂಸಲೇಮಿಗೆ ಪ್ರಯಾಣ ಮಾಡುತ್ತಿದ್ದನು ಎಂಬುದನ್ನು ಖಚಿತಪಡಿಸಿಕೊಳ್ಳಬಹುದು, ಯಾಕಂದರೆ ಪ್ರಯಾಣ ಮಾಡಬಹುದಾದ ಅಂತರದಲ್ಲಿರುವ ಪ್ರತಿಯೊಬ್ಬ ಯೆಹೂದಿ ಪುರುಷನಿಗೆ ಇದು ಅವಶ್ಯವಾಗಿತ್ತು.

ಯೇಸು ಈ ಸನ್ನಿವೇಶದಲ್ಲಿ ದುಃಖಪಟ್ಟನೋ ಇಲ್ಲವೋ (ನೋಡಿರಿ ಲೂಕ 19:41), ಅವನ ಮಾತುಗಳು ಆಳವಾದ ದುಃಖ ಮತ್ತು ವೇದನೆಯನ್ನು ವ್ಯಕ್ತಪಡಿಸುತ್ತವೆ. ಆತನು ಯೆಹೂದ್ಯರನ್ನು ತನ್ನ ರೆಕ್ಕೆಯ ಕೆಳಗೆ ಕೂಡಿಸಿಕೊಳ್ಳುವದು ಆತನಿಗೆ ಎಷ್ಟೋ ಸಾರಿ ಮನಸ್ಸಿತ್ತು ಆದರೆ ಅವರಿಗೆ ಮನಸ್ಸಿಲ್ಲದೇ ಹೋಯಿತು ಎಂದು ಪ್ರಲಾಪಿಸುತ್ತಾನೆ. ಯೇಸು ತನ್ನನ್ನು ತಾನು ತನ್ನ **ಮರಿಗಳನ್ನು** ಆಕ್ರಮಣ ಮಾಡುವವರಿಂದ ಮತ್ತು ಕೆಟ್ಟ ವಾತವರಣದಿಂದ ಸಂರಕ್ಷಿಸಲು ತನ್ನ **ರೆಕ್ಕೆಗಳ ಕೆಳಗೆ** ಕೂಡಿಸಿಕೊಳ್ಳುವದರ ಮೂಲಕ ಅವುಗಳಿಗೆ ಸುರಕ್ಷಿತತೆಯ ಭರವಸೆಯನ್ನು ನೀಡುವ **ಕೋಳಿಗೆ** ಹೋಲಿಸಿಕೊಳ್ಳುತ್ತಾನೆ. ಇಂಥಹದೇ ಕಲ್ಪನೆಗಳು ಹಳೆ ಒಡಂಬಡಿಕೆಯಲ್ಲಿ ಕಂಡುಬರುತ್ತದೆ ಅವು ದೇವರ ಸಂರಕ್ಷಣೆಯನ್ನು ಮತ್ತು ಇಸ್ರಾಯೇಲರ ಬಿಡುಗಡೆಯನ್ನು ವ್ಯಕ್ತಪಡಿಸುತ್ತವೆ (ಧರ್ಮೋಪದೇಶಕಾಂಡ 32:11; ರೂತಳು 2:12; ಕೀರ್ತನೆ 17:8; 36:7; 57:1 61:4; 63:7; 91:4; ಯೆಶಾಯ 31:5).

ಈ ಪದ್ಯದ ದುಃಖಕರವಾದ ಭಾಗವೆಂದರೆ ನಿಮಗೆ ಮನಸ್ಸಿಲ್ಲದೇ ಹೋಯಿತು ಎಂಬ ಹೇಳಿಕೆ. ಮುಖ್ಯವಿಷಯ ತಿರಸ್ಕರಿಸುವಿಕೆ ಇದು ದೇವಜನರ ಕಠಿಣ ಚಿತ್ತವನ್ನು ಪ್ರತಿಫಲಿಸುತ್ತದೆ, ಇದನ್ನು ಹಿಂದಿನ ಸಾಮ್ಯಗಳಿಂದ ಮುಂದುವರೆಸಿಕೊಂಡು ಹೋಗಲಾಗಿದೆ. ಯೆಹೂದಿ ನಾಯಕರು ದೇವರ ಸಂದೇಶವಾಹಕರನ್ನು ಆಲಿಸಲಿಲ್ಲ ಮತ್ತು ಕೊನೆಯಲ್ಲಿ ಆತನ ಮಗನನ್ನು ತಿರಸ್ಕರಿಸಿದರು (21:34-39). ಅವರು ಮೇಲಿದ ಮೇಲೆ ಆತನು ನೀಡಿದ ಆಮಂತ್ರಣಕ್ಕೆ ಗಮನಕೊಡಲಿಲ್ಲ (22:3-6).

**ವಚನಗಳು 38, 39.** ಯೇಸು ಪ್ರವಾದಿಸಿದನು, **ನಿಮ್ಮ ಆಲಯವು ನಿಮಗೆ ಬರೀದಾಗಿ ಬಿಟ್ಟದೆ.** ಯೆಹೂದ್ಯರು ದೇವರ ಸಂಧಿಪ್ರಸ್ತಾಪವನ್ನು ತಿರಸ್ಕರಿಸಿದ್ದರಿಂದ, ಆತನು ತನ್ನ ಅಂತ್ಯದ ತೀರ್ಪನ್ನು ಪ್ರಕಟಿಸಿದನು. ಇಲ್ಲಿರುವ ಭಾಷೆ ಹಳೆ ಒಡಂಬಡಿಕೆಯಲ್ಲಿರುವ ಕೆಲವು ವಾಕ್ಯಭಾಗಗಳನ್ನು ಜ್ಞಾಪಕಕ್ಕೆ ತರುತ್ತದೆ (ಯೆರೆಮೀಯ 12:7; 22:5; 26:6, 9). "ಆಲಯ" ಎಂಬ ಪದ ದೇವಾಲಯವನ್ನಾಗಲಿ (1 ಅರಸುಗಳು 9:7, 8; ಹಗ್ಗಾಯ 1:4, 9; ಮತ್ತಾಯ 21:13) ಅಥವಾ ಯೆರೂಸಲೇಮ ಪಟ್ಟಣವನ್ನಾಗಲಿ ಉಲ್ಲೇಖಿಸುತ್ತದೆ. ನಾಶಮಾಡುವ ವಿಚಾರ ಪರಿತ್ಯಾಗ ಮಾಡುವದು ಅಥವಾ ಹಾಳು ಮಾಡುವದು ಎಂಬುದಾಗಿದೆ. ದೇವರು ತನ್ನ ದೇವಾ ಲಯವನ್ನು ಮತ್ತು ತನ್ನ ಜನರನ್ನು ಕೈಬಿಡುತ್ತಾನೆ. ಕ್ರಿ.ಶ. 70ರಲ್ಲಿ, ಆತನು ರೋಮಾ ಸೈನಿಕರನ್ನು ಯೆರೂಸಲೇಮ ಪಟ್ಟಣವನ್ನು ನಾಶಮಾಡಲು ಅನುಮತಿಸುತ್ತಾನೆ. ಯೇಸು ತಾನು ಬೋಧಿಸುತ್ತಿದ್ದ ಸ್ಥಳ ಮತ್ತು ತಾನು ಮಾತನಾಡುತ್ತಿದ್ದ ಜನರ ಅಧೋಗತಿಯ ಕುರಿತು ಪ್ರವಾದಿಸುತ್ತಾನೆ. ಈ ವಚನವು ಯೆರೂಸಲೇಮಿನ ನಾಶನದ ಕುರಿತು 24ನೇ ಅಧ್ಯಾಯದ ವ್ಯಯಕ್ತಿಕ ಪ್ರವಚನದಲ್ಲಿ ಮೊದಲೇ ತಿಳಿಸುತ್ತದೆ.

ಯೇಸು ಅವರಿಗೆ **ಈಗಿನಿಂದ - ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ** ಎಂದು ನೀವು ಹೇಳುವ ತನಕ ನೀವು ನನ್ನನ್ನು **ನೋಡುವದೇ ಇಲ್ಲವೆಂದು** ನಿಮಗೆ ಹೇಳುತ್ತೇನೆ ಅಂದನು (ನೋಡಿರಿ ಕೀರ್ತನೆ 118:26). ಈ ವಾಕ್ಯಭಾಗವು ಯೆಹೂದಿ ಯಾತ್ರಿಗಳು ಆತನು ವಿಜಯೋತ್ಸವದಿಂದ ಯೆರೂಸಲೇಮನ್ನು ಪ್ರವೇಶಿಸುವಾಗ ಯೇಸುವಿಗೆ ಗೌರವಪೂರ್ವಕವಾಗಿ

ಹೇಳಿದ ಹೇಳಿಕೆಯಾಗಿತ್ತು (ಮೇಲಿನ ವ್ಯಾಖ್ಯಾನ ನೋಡಿರಿ 21:9ರ). ಈ ಹೇಳಿಕೆ ಆತನ ಸಾರ್ವಜನಿಕ ಸೇವೆಯನ್ನು ಮುಕ್ತಾಯಗೊಳಿಸಿತು ಮತ್ತು ಇದು ಆತನ ಎರಡನೆಯ ಬರೋಣದೆಡೆಗೆ ಸೂಚಿಸಿತು, ಇದನ್ನು 24 ಮತ್ತು 25ನೇ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಆ ಸಮಯದಲ್ಲಿ ಅವರಿಗೆ ಆತನು ಯಾರಾಗಿದ್ದಾನೆ ಎಂಬುದನ್ನು ಸ್ವೀಕರಿಸುವದನ್ನು ಬಿಟ್ಟರೆ ಬೇರೆ ಮಾರ್ಗವಿರಲಿಲ್ಲ,[41] ಆತನನ್ನು "ಕರ್ತನ ಹೆಸರಿನಲ್ಲಿ ಬರುವವನು!" ಎಂದು ಗುರುತಿಸಲೇ ಬೇಕಾಗಿತ್ತು. ಪೌಲನು ಹೇಳುತ್ತಾನೆ, "ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು" ಮತ್ತು "ಯೇಸುವನ್ನು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು" (ಫಿಲಿಪ್ಪಿ 2:10, 11).

ಯೇಸು ತಾನು ತಿರುಗಿ ಲೋಕಕ್ಕೆ ಬರುವದರ ಕುರಿತು ಏನನ್ನೂ ಹೇಳುವದಿಲ್ಲ. ಆತನು ನಂತರ ಸಮಿತಿಯವರಿಗೆ, "ಇದಲ್ಲದೆ ಇನ್ನು ಮೇಲೆ ಮನುಷ್ಯಕುಮಾರನು ಸರ್ವಶಕ್ತನ ಬಲಗಡೆಯಲ್ಲಿ ಆಸೀನನಾಗಿರುವದನ್ನು ಆಕಾಶದ ಮೇಘಗಳ ಮೇಲೆ ಕುಳಿತು ಬರುವದನ್ನು ಕಾಣುವಿರಿ" ಎಂದು ಹೇಳಿದನು (26:64). ಪೌಲನು "ಆ ಮೇಲೆ ಜೀವದಿಂದುಳಿದಿರುವ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ ಅವರ ಸಂಗಡದಲ್ಲೇ ಮೇಘವಾಹನರಾಗಿ ಒಯ್ಯಲ್ಪಡುವೆವು, ಹೀಗಾಗಿ ನಾವು ಸದಾಕಾಲವೂ ಕರ್ತನ ಜೊತೆಯಲ್ಲಿರುವೆವು" ಎಂದು ಹೇಳುತ್ತಾನೆ (1 ಥೆಸಲೋನಿಕ 4:17). ಆತನು ಇನ್ನೂ ಮುಂದೆ ಈ ಭೂಮಿಯ ಮೇಲೆ ಪಾದಗಳನ್ನು ಇಡುವದಿಲ್ಲ. ಪ್ರಕಟನೆಯ ಗ್ರಂಥಕರ್ತನಾದ ಯೋಹಾನನು ಹೀಗೆ ಬರೆಯುತ್ತಾನೆ, "ಇಗೋ ಮೇಘಗಳೊಂದಿಗೆ ಬರುತ್ತಾನೆ; ಎಲ್ಲರ ಕಣ್ಣುಗಳು ಆತನನ್ನು ಕಾಣುವವು; ಆತನನ್ನು ಇರಿದವರು ಸಹ ಕಾಣುವರು; ಭೂಮಿಯಲ್ಲಿರುವ ಎಲ್ಲಾ ಕುಲದವರು ಆತನನ್ನು ನೋಡಿ ಎದೆ ಬಡೆದುಕೊಳ್ಳುವರು. ಹೌದು, ಹಾಗೆಯೇ ಆಗುವದು. ಆಮೇನ್" (ಪ್ರಕಟಣೆ 1:7).

## ಪಾಠಗಳು

## ದಶಮಾಂಶ ನೀಡುವದು (23:23)

ಹಳೆ ಒಡಂಬಡಿಕೆಯಲ್ಲಿ ದಶಮಾಂಶವು ಒಂದು ಅವಶ್ಯಕತೆಯಾಗಿದೆ, ಆದರೆ ಹೊಸ ಒಡಂಬಡಿಕೆಯಲ್ಲಿ ಅದಕ್ಕೆ ಸ್ಥಳವಿಲ್ಲ. ಈ ಆಚರಣೆಯ ಕುರಿತು ಕೇವಲ ಬೆರೆಣಿಸುವಷ್ಟು ಸಾರಿ ಹೊಸ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿದೆ. ಸುವಾರ್ತೆಯಲ್ಲಿ ಇದು ಯಾವಾಗಲೂ ಶಾಸ್ತ್ರಿಗಳ ಮತ್ತು ಫರಿಸಾಯರ ಕೃತ್ಯಗಳನ್ನು ಉಲ್ಲೇಖಿಸುತ್ತದೆ (23:23; ಲೂಕ 11:42; 18:12). ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ದಶಮಾಂಶವನ್ನು ನೀಡುವದನ್ನು ಹಳೆ ಒಡಂಬಡಿಕೆಯ ಆಚಾರ ಎಂದು ಗೌರವಿಸಲಾಗಿದೆ. ಅಬ್ರಹಾಮನು ಸಾಲೇಮಿನ ಯಾಜಕನಾದ ಮೇಲ್ಕಿಜೇದಕನಿಗೆ ದಶಮಾಂಶವನ್ನು ನೀಡಿದನು, ನಂತರ ಇಸ್ರಾಯೇಲರು ಲೇವಿಯರಿಗೆ ದಶಮಾಂಶವನ್ನು ನೀಡಿದರು (ಇಬ್ರಿಯ 7:4-10). ದಶಮಾಂಶವನ್ನು ನೀಡುವ ಪದ್ಧತಿಯ ಮೂಲಕ, ಯಾಜಕತ್ವವನ್ನು ಬೆಂಬಲಿಸುತ್ತಿದ್ದರು; ಇದನ್ನು ತೆರಿಗೆಗೆ ಹೋಲಿಸುತ್ತಿದ್ದರು.[42] ಕ್ರೈಸ್ತರಿಗೆ ದಶಮಾಂಶ ನೀಡಬೇಕೆಂದು ಎಂದೂ ಆಜ್ಞಾಪಿಸಿಲ್ಲ. ಬದಲಾಗಿ, ನಾವು ನಮ್ಮ ಆದಾಯದಿಂದ ಪ್ರತಿಯೊಬ್ಬನು ತನ್ನ ಹೃದಯದಲ್ಲಿ ನಿರ್ಣಯಿಸಿಕೊಂಡ ಪ್ರಕಾರ ಸಂತೋಷ ದಿಂದ ಕೊಡಬೇಕು (2 ಕೊರಿಂಥ 9:7).

---

ಟಿಪ್ಪಣೆಗಳು

[1]John MacArthur, Jr., *The MacArthur New Testament Commentary: Matthew 16-23* (Chicago: Moody Press, 1988), 375. [2]Bruce M. Metzger, *A Textual Commentary on the Greek New Testament,* 2d ed. (Stuttgart: German Bible Society, 1994), 50.

[3]ನೋಡಿರಿTalmud *Gittin* 52ab. [4]ನೋಡಿರಿ T*estament of Moses* 7.6. [5]Josephus *Antiquities* 14.7.2. [6]Ibid., 20.2.3, 4; Tacitus *Histories* 5.5; Horace *Satires* 1.4.142, 143. [7]ಹೋಲಿಕೆಯಾಗಿ, ಯೂದನನ್ನು "ನಾಶನದ ಮಗನು" ಎಂದು ಕರೆಯಲ್ಪಟ್ಟನು (ಯೋಹಾನ 17:12). ಅದಕ್ಕೆ ಕೂಡಿಸಿ Talmudನಲ್ಲಿ "ಪಾತಾಳ ಮಕ್ಕಳು" ಎಂದು ಒಳಗೊಂಡಿದೆ (Talmud Rosh *ha-Shanah* 17a). ಅದಕ್ಕೆ ವಿರೋಧವಾಗಿ ಹೇಳಿರುವದು "ದೇವರ ರಾಜ್ಯದ ಮಕ್ಕಳು" (13:38). [8]David E. Garland, "Oaths and Swearing," in *Dictionary of Jesus and the Gospels,* ed. Joel B. Green and Scot McKnight (Downers Grove, Ill.: Inter-Varsity Press, 1992), 578. [9]Josephus *Wars* 5.5.6. [10]Josephus *Antiquities* 14.4.4; 14.7.1, 2; *Against Apion* 2.7.

[11]Alan Hugh McNeile, *The Gospel According to St. Matthew* (London: Macmillan and Co., 1938), 334. [12]Donald A. Hagner, *Matthew 14-28,* Word Biblical Commentary, vol. 33B (Dallas: Word Books, 1995), 669. [13]Mishnah *Shebuoth* 4.13. [14]Douglas R. A. Hare, *Matthew,* Interpretation (Louisville: John Knox Press, 1993), 269. [15]ಲೇವಿಗಳು, ಹಿಂತಿರುಗಿ, ಯಾಜಕರಿಗೆ ದಶಮಭಾಗ ಕೊಡಬೇಕಾಗಿತ್ತು (ಅರಣ್ಯಕಾಂಡ 18:25-32). [16]Mishnah *Maaseroth* 4.5. [17]Mishnah ಪ್ರಕಾರ, ದಶಮಾಂಶವು ಹಿಂಸೆಯ ರೂಪ ತಾಳುವದು ಬೇಕಾಗಿರಲಿಲ್ಲ ಯಾಕೆಂದರೆ ಇದು ಕ್ರೂರವಾಗಿ ಬೆಳೆದಿದೆ (Mishnah *Shebiith* 9.1.) [18]ಈ ಅಧ್ಯಾಯದಲ್ಲಿ "ಬಹಳ" ಬಾರವು (23:4) ಎನ್ನುವದಕ್ಕೆ ಅಧ್ಯಾಯದಲ್ಲಿ ಈ ಮೊದಲೆ ಸಮವಾಗಿರುವ ಗ್ರೀಕ್ ಪದವನ್ನು ಉಪಯೋಗಿಸಲಾಗಿದೆ. [19]Mishnah *Aboth* 2.1; 4.2. [20]See Talmud *Shabbath* 12a.

[21]Hagner, 670–71; R. T. France, *The Gospel According to Matthew,* The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 329. [22]Mishnah *Shabbath* 20.1, 2; Talmud *Hullin* 67a. [23]Mishnah Kelim 25.7, 8. ಒಂದು ಬಟ್ಟಲು ಒಂದು ಭಾಗವನ್ನು ಸ್ವಚ್ಛಗೊಳಿಸುವದರ ಪರಿಣಾಮ ಇತರರಿಗೆ ಹೇಗೆ ಪರಿಣಾಮ ಬೀರುತ್ತದೆ ಎನ್ನುವದರಲ್ಲಿ ಯೆಹೂದ್ಯ ಪಂಡಿತರು ಬೇರೆ ಬೇರೆ ಅಭಿಪ್ರಾಯಗಳನ್ನು ಹೊಂದಿದ್ದರು. (*Tohoroth* 8.7; *Parah* 12.8.) ಹೆಚ್ಚಿನ ಮಾಹಿತಿಗಾಗಿ, ನೋಡಿರಿ Jacob Neusner, "First Cleanse the Inside," *New Testament Studies* 22 (July 1976): 486–95. [24]Mishnah *Shekalim* 1.1; Moed *Qatan* 1.2; *Maaser Sheni* 5.1 "ಸಮಾಧಿಗಳು" (*taphos*) ಎನ್ನುವದಕ್ಕೆ ಇನ್ನೊಂದು ಹೆಸರು ಸತ್ತವರ ಎಲುಬುಗಳನ್ನು ಇಡುವ ಸ್ಥಳ "ossuaries." ನೋಡಿರಿ Samuel T. Lachs, "On Matthew 23:27-28," *Harvard Theological Review* 68 (July-October 1975): 385–88. ಕೆಲವು ಸತ್ತವರ ಎಲುಬುಗಳನ್ನು ಇಡುವ ಸ್ಥಳಗಳು ಶೃಂಗರಿಸುತ್ತಿದ್ದರು ಮತ್ತು ಚೆಂದವಾಗಿರುತ್ತಿದ್ದವು, ಆದರೆ ಸತ್ತವರ ದೇಹವನ್ನು ನಾಶಮಾಡಿದ ಮೇಲೆ ಎಲುಬುಗಳನ್ನು ಹಾಗೆ ಮಾಡುತ್ತಿದ್ದರು. [25]ಪಸ್ಕ ಹಬ್ಬದ ಸಮಯ ಇರುವದರಿಂದ ಸಮಾಧಿಗಳು ಚೆನ್ನಾಗಿ ಕಾಣಲು ಅವರು ಸುಣ್ಣವನ್ನು ಬಳಿದರು. ಯೇಸುವಿನ ಬಹಳಷ್ಟು ಜನರಲ್ಲಿ ಇತ್ತಿಚೆಗೆ ಅವುಗಳನ್ನು ಕೆಲವರು ನೋಡಿರುವದರಲ್ಲಿ ಸಂಶಯವಿಲ್ಲ. [26]William Hendriksen, *New Testament Commentary: Exposition of the Gospel According to Matthew* (Grand Rapids, Mich.: Baker Book House, 1973), 835. [27]Talmud *Berakoth* 28a. [28]Walter Bauer, *A Greek-English Lexicon of the New Testament and Other Early Christian Literature,* 3d ed., rev. and ed. Frederick W. Danker (Chicago: University of Chicago Press, 2000), 654-55. The term *mnēmeion* nearly always refers to a "tomb" in the New Testament (8:28; 27:52, 53, 60; 28:8; ಮಾರ್ಕ 5:2, 3; 6:29; 15:46; 16:2-8; ಲೂಕ 11:44; 23:55; 24:2, 9, 12, 22, 24; ಯೋಹಾನ 5:28; 11:17, 31, 38; 12:17; 19:41, 42; 20:1-11; ಅಪೊಸ್ತಲರ ಕೃತ್ಯಗಳು 13:29). [29]A. F. Albright and C. S. Mann, *Matthew,* The Anchor Bible (Garden City, N.Y.: Doubleday & Co., 1971), 281-82. [30] 1 Maccabees 13:27-29 (NRSV).

[31]Josephus *Antiquities* 16.7.1. David's tomb is mentioned in Acts 2:29. [32]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 586. [33]Alexander Balmain Bruce, "The Gospel According to Matthew," in *The Expositor's Greek Testament, vol. 1, The Synoptic Gospels-The Gospel of St. John* (Grand Rapids, Mich.: Wm. B. Eerdmans Publishing Co., 1951), 285. [34]Hendriksen, 835. [35]In Matthew 23, Jesus was probably speaking in

the hearing of some who were still members of that council when Stephen was stoned. [36]ಅಪೊಸ್ತಲರ ಕೃತ್ಯಗಳು 13:45, 50; 14:2, 5, 6, 19;17:5, 13; 18:12; 19:8, 9; 20:3; 21:27; 23:12; 24:1-9; 25:2, 3; 2 ಕೊರಿಂಥ 11:23-26. [37]Gary M. Burge, "Zechariah," in *The International Standard Bible Encyclopedia,* 4:1182-83. [38]Josephus *Wars* 4.5.4. [39]The minor prophet Zechariah is called "the son of Berechiah, the son of Iddo" (Zech. 1:1) and simply "the son of Iddo" (Ezra 6:14). [40]France, 331.

[41]Hagner, 681. [42]MacArthur, 384-85.